

# ಭೃಗುವಾಣಿ

ಆನಂದ ಬಳಗದ ತ್ರೈಮಾಸಿಕ ಪತ್ರಿಕೆ

ಸಂಪುಟ 31 | ಅಕ್ಟೋಬರ್ – ಡಿಸೆಂಬರ್ 2018 | ರೂ. 10/– | ಸಂಚಿಕೆ 03



ಪೂಜ್ಯ ಪೇಜಾವರ ಶ್ರೀಗಳಿಗೆ ಮಾನ್ಯ ರಾಷ್ಟ್ರಪತಿಯವರಿಂದ ಅಭಿವಂದನೆ



ಖುಷಿ ನೀಡಿದ ಎ.ಪಿ.ಎಲ್. 2018



ಕ್ಯಾಲೆಂಡರ್ 2019 ಬಿಡುಗಡೆ



ಮುದ ನೀಡಿದ ಪ್ರವಾಸ



ಅಂಡಮಾನಿಗೆ ರೋಚಕ ಪ್ರಯಾಣ

**ಗಮನಿಸಿ**

► ಬಳಗದ ವಾರ್ಷಿಕೋತ್ಸವ : 24.2.2019

*With best compliments from :*

# TEDMAG ENGINEERING & MANAGEMENT CONSULTANTS (P) LTD.

**SWAGAT, 1209, 11th CROSS,**
**HSR LAYOUT SECTOR I,**
**BANGALORE – 560 102.**

**TEL.: +91 (0)80 22586129**
**FAX: +91 (0)80 22589134**

**E-mail:**
**Bangalore : tedmagemc@hotmail.com**
**sridhar_bhat@yahoo.com**
**Chennai : myram47@gmail.com**
**Mumbai : mindi1940@yahoo.com**

- MILK PROCESSING
- FOOD PROCESSING
- PLANT TISSUE CULTURE
- ALLIED INDUSTRIES

ಭೃಗುವಾಣಿ
ಆನಂದ ಬಳಗದ ತ್ರೈಮಾಸಿಕ ಪತ್ರಿಕೆ

ಸಂಪುಟ 31 ಸಂಚಿಕೆ 03

ಅಧ್ಯಕ್ಷರು :
ಗೀತಾ ವಾಸುದೇವ ರಾವ್

ಕಾರ್ಯದರ್ಶಿ :
ಎಸ್. ಹರಿದಾಸ ಉಪಾಧ್ಯ

ಸಂಪಾದಕರು :
ಎಂ. ಸತ್ಯನಾರಾಯಣ ಭಟ್

ಸಂಪಾದಕ ಮಂಡಳಿ :
ಹರಿದಾಸ ಮುನ್ನೂರು
ಬಿ. ರಾಮದಾಸ ತಂತ್ರಿ
ಡಿ. ಶರತ್ ಕುಮಾರ ಭಟ್
ಕೆ.ಎನ್. ಅಡಿಗ
ರಂಜಿತ್ ಯಡಪಾಡಿತ್ತಾಯ
ವೈ. ಜಯಂತರಾವ್
ಟಿ.ಎಸ್. ನಾಗರಾಜ ಉಪಾಧ್ಯಾಯ

ಸಲಹೆಗಾರರು :
ಶ್ರೀಮತಿ ವಿಜಯಲಕ್ಷ್ಮಿ ಭಟ್

ಜಾಹೀರಾತು ಸಮನ್ವಯ :
ಶ್ರೀ ವೈ. ರಾಧಾಕೃಷ್ಣ
ಶ್ರೀ ಬಿ.ಎಸ್. ಬಾಲಚಂದ್ರ
ತೋಳ್ಪಾಡಿ

ಛಾಯಾಚಿತ್ರಗಳು
ಕೆ. ಬಾಲಕೃಷ್ಣ ಉಪಾಧ್ಯಾಯ

ವಿಳಾಸ :
**ಆನಂದ ಬಳಗ**
ಹೋಟೆಲ್ ಅಜಂತಾ ಆವರಣ
22ಎ, ಎಂ.ಜಿ. ರಸ್ತೆ
ಬೆಂಗಳೂರು – 560 001
ದೂರವಾಣಿ : 2559 4457

Website:
www.anandabalaga.org

# ಅಧ್ಯಕ್ಷರ ಮಾತು



ಪ್ರಿಯ ಸದಸ್ಯ ಬಂಧುಗಳೇ,

ಹಳೆ ವರುಷ 2018 ಹಿಂದೆ ಸರಿದು, 2019 ಇಸವಿ ಈಗಾಗಲೇ ಆರಂಭವಾಗಿದೆ. ನೋವು-ನಲಿವುಗಳ ಮಿಶ್ರಣದ 2018ಕ್ಕೆ ವಿದಾಯ ಹೇಳಿ, ಹೊಸ ಇಸವಿಯನ್ನು ಎಲ್ಲರಂತೆ ನಾವೂ ಸ್ವಾಗತಿಸಲೇಬೇಕು. ಈ ವರುಷದ ಹನ್ನೆರಡು ತಿಂಗಳುಗಳ ದಿನಚರಿಯನ್ನು ತಿಳಿಸುವ ಆನಂದ ಬಳಗದ 2019ನೇ ವರ್ಷದ ಕ್ಯಾಲೆಂಡರನ್ನು ಈಗಾಗಲೇ ಬಿಡುಗಡೆ ಮಾಡಲಾಗಿದ್ದು, ಸಕಾಲದಲ್ಲಿ ಅದು ನಮ್ಮ ಸದಸ್ಯರ ಮನೆಯನ್ನು ಸೇರಿ, ಸೂಕ್ತ ಜಾಗದಲ್ಲಿ ಅಲಂಕರಿಸಿದೆ ಎಂದು ನಮ್ಮ ನಂಬಿಕೆ. ಸುಂದರವಾಗಿರುವ ಕ್ಯಾಲೆಂಡರನ್ನು ಬಹಳಷ್ಟು ಮುಂಚಿತವಾಗಿಯೇ ಸಿದ್ಧಗೊಳಿಸಿ, ಸದಸ್ಯರ ಮನೆ ತಲುಪಿಸುವಲ್ಲಿ ಶ್ರಮಿಸಿದ ಯುವ ವಿಭಾಗಕ್ಕೆ ಅಭಿನಂದನೆಗಳು.

ಇನ್ನು, ಯುವ ವಿಭಾಗ ಸಂಯೋಜಿಸಿದ್ದ ಆನಂದ ಬಳಗ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾಟ, ಧಾರ್ಮಿಕ ವಿಭಾಗದ ನೇತೃತ್ವದಲ್ಲಿ ನಡೆದ ತುಳಸೀ ಸಂಕೀರ್ತನೆ, ಸಾಂಸ್ಕೃತಿಕ ವಿಭಾಗ ಏರ್ಪಡಿಸಿದ್ದ ಒಂದು ದಿನದ ಪ್ರವಾಸ – ಈ ಎಲ್ಲಾ ಕಾರ್ಯಕ್ರಮಗಳಲ್ಲೂ ಸದಸ್ಯರು ಉತ್ತಮ ರೀತಿಯಲ್ಲಿ ಪಾಲ್ಗೊಂಡಿದ್ದು, ಸದಸ್ಯರನ್ನು ಮತ್ತಷ್ಟು ಸಮೀಪಕ್ಕೆ ತರುವಲ್ಲಿ ಈ ಚಟುವಟಿಕೆಗಳು ಸಹಕಾರಿಯಾಗಿದೆ ಎಂದು ನನ್ನ ವಿಶ್ವಾಸ.

ನಮ್ಮ ಆನಂದ ಬಳಗವು ಶ್ರೀ ಪೇಜಾವರ ಮಠಾಧೀಶರಾದ ಪರಮಪೂಜ್ಯ ಶ್ರೀ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿಯವರ ಅನುಗ್ರಹದ ಶ್ರೀರಕ್ಷೆಯಲ್ಲಿ ಬೆಳೆಯುತ್ತಿದ್ದು, ಸ್ವಾಮೀಜಿಯವರ ಸನ್ಯಾಸ ಸ್ವೀಕಾರದ 80ನೇ ವರ್ಷದ ಆಚರಣೆ ಇತ್ತೀಚೆಗೆ ಎಲ್ಲೆಡೆಯೂ ಅರ್ಥಪೂರ್ಣವಾಗಿ ನಡೆದಿದೆ. ಈ ಅಪರೂಪದ ಸಂದರ್ಭದಲ್ಲಿ ಉಡುಪಿಗೆ ಆಗಮಿಸಿದ ಭಾರತದ ಸನ್ಮಾನ್ಯ ರಾಷ್ಟ್ರಪತಿಯವರು ಪೂಜ್ಯ ಪೇಜಾವರ ಶ್ರೀಯವರಿಗೆ ಗೌರವದ ಅಭಿವಂದನೆಗಳನ್ನು ಸಲ್ಲಿಸಿದ್ದು, ಶ್ರೀಗಳ ಮಾರ್ಗದರ್ಶನ ನಮ್ಮ ಸಮಾಜಕ್ಕೆ ಇನ್ನೂ ಬಹಳಷ್ಟು ಕಾಲ ಲಭಿಸುತ್ತಿರಲಿ ಎಂದು ಆಶಿಸಿದ್ದಾರೆ. ಈ ಪರ್ವಕಾಲದಲ್ಲಿ ಪೂಜ್ಯ ಪೇಜಾವರ ಶ್ರೀಗಳಿಗೆ ಆನಂದ ಬಳಗದ ಭಕ್ತಿಪೂರ್ವಕ ನಮನಗಳನ್ನು ಸಲ್ಲಿಸುತ್ತಿದ್ದೇವೆ.

ಕರ್ನಾಟಕ ಸರ್ಕಾರವು ಪ್ರತಿವರ್ಷ ನೀಡುವ ರಾಜ್ಯೋತ್ಸವ ಪ್ರಶಸ್ತಿ ಈ ವರ್ಷ ನಮ್ಮ ಬಳಗದ ಪರಮ ಹಿತೈಷಿಗಳಾದ ಖ್ಯಾತ ಉದ್ಯಮಿ ಶ್ರೀ ಪಿ. ರಾಮದಾಸ್ ಮಡಮಣ್ಣಾಯ, ಪ್ರಸಿದ್ಧ ಹೃದ್ರೋಗ ತಜ್ಞರಾದ ಡಾ.ಪಿ. ಮೋಹನ್‌ರಾವ್ ಮತ್ತು ಡಾ.ಪಿ. ಸೀತಾರಾಂ ಭಟ್ ರವರಿಗೆ ಲಭಿಸಿದೆ. ಬಳಗಕ್ಕೆ ಕೀರ್ತಿ ಮತ್ತು ಹೆಮ್ಮೆ ತಂದಿರುವ ಈ ಮೂವರು ಪ್ರಶಸ್ತಿ ಪುರಸ್ಕೃತರಿಗೆ ನಮ್ಮೆಲ್ಲರ ಅಭಿಮಾನದ ಅಭಿನಂದನೆಗಳು.

ಬಳಗದ ವಾರ್ಷಿಕೋತ್ಸವ ದಿ.24.2.2019 ರಂದು ನಡೆಯಲಿದೆ. ಇದರ ಆಮಂತ್ರಣ ಪತ್ರಿಕೆ ಸಕಾಲದಲ್ಲಿ ತಮ್ಮ ಕೈಸೇರಲಿದೆ. ಅಧಿಕ ಸಂಖ್ಯೆಯಲ್ಲಿ ಬಂದು, ಸಕ್ರಿಯವಾಗಿ ಭಾಗವಹಿಸಬೇಕಾಗಿ ನನ್ನ ಅಪೇಕ್ಷೆ ಮತ್ತು ಆಮಂತ್ರಣ.

ಮತ್ತೆ ಸಿಗೋಣ....

ಶುಭಾಶಯಗಳೊಂದಿಗೆ.

– ಗೀತಾ ವಾಸುದೇವರಾವ್

## Executive Committee Members : 2018-2020

| Name | Contact Numbers |
|---|---|
| ***President*** | |
| Geetha Vasudeva Rao | 98808 99997 |
| ***Vice President*** | |
| B. Ramachandra Upadhya | 99024 00072 |
| Smt. Vijayalakshmi Bhat S. | 98441 52107 |
| ***Secretary*** | |
| S. Haridas Upadhya | 94480 01892 |
| ***Joint Secretary*** | |
| A. Sandeep Rao | 98450 98150 |
| ***Treasurer*** | |
| Y. Radhakrishna | 98440 58851 |
| ***Asst. Treasurer*** | |
| B.S. Balachandra Tolpadi | 94481 34268 |
| ***Convener, Cultural Wing*** | |
| H. Ramesh Bhat | 98450 24708 |
| ***Convener, Religious Wing*** | |
| Y. Jayantha Rao | 94482 74519 |
| ***Convener, Youth Wing*** | |
| M. Krishna Prasad | 98450 18183 |
| ***Convener, Edn. Assistance Program*** | |
| Sharath Chandra S.N. | 98860 40271 |
| ***Convener, Public Relation Wing*** | |
| K.N. Adiga | 94488 48154 |
| ***Convener, Membership Devt. Wing*** | |
| M.K. Gurumurthy | 98440 22692 |
| ***Convener, Community Services*** | |
| P.C. Rao | 98444 46309 |
| ***Convener, Media & Communications*** | |
| M. Dinesh Rao | 98456 88955 |
| ***Editor, Brughu Vani*** | |
| M. Sathyanarayana Bhat | 99458 02607 |
| ***Members*** | |
| Kasturi Aithal | 98803 98353 |
| ***Co-opted Members*** | |
| Geetha P.R. Rao | 99459 38411 |
| M Mohan Rao | 98453 79956 |
| Jayaprakash Mady | 98450 09669 |
| ***Permanent Invitees / Past Presidents*** | |
| P.S. Bagilthaya | 98440 83582 |
| K. Vasudeva Rao | 98450 57111 |
| Padubidri Raghavendra Rao | 2287 2705 |
| UAP Ballal | 2226 7609 |
| STR Madi | 99029 77948 |
| ***Special Invitees*** | |
| T.S. Nagaraja Upadhyaya | 93412 26763 |
| Sudha M Rao | 99011 27738 |
| U V Krishna Murthy | 98440 24136 |
| Dr. (Smt.) Veena Sharath | 99860 80271 |
| Y. Sripathy Bhat | 65626972 |
| K. Gopala Krishna | 99801 28049 |
| Madhavi Ballal | 99860 39107 |

ಒಳಪುಟಗಳಲ್ಲಿ. . .


ಅಧ್ಯಕ್ಷರ ಮಾತು ... 1

ಪೇಜಾವರ ಶ್ರೀಪಾದರಿಗೆ ಅಭಿವಂದನೆ ... 3

ಬಳಗದ ಕ್ಯಾಲೆಂಡರ್ ಬಿಡುಗಡೆ ... 4

ಯಶಸ್ವಾದ ಎ.ಪಿ.ಎಲ್. 2018 ... 5

ಬಳಗದ ಒಂದು ದಿನದ ಪ್ರವಾಸ ... 7

ಬಳಗದ ಹಿತೈಷಿಗಳಿಗೆ ರಾಜ್ಯೋತ್ಸವ ಪ್ರಶಸ್ತಿ ... 11

ಅಹಾ ಸೊನ್ನೆ + ಅನುಭವಪೂರ್ಣ ವಚನಗಳು ... 12

ಆರೋಗ್ಯ ಕಾಳಜಿ ... 13

ಅಂಡಮಾನ್ ಪ್ರವಾಸ ಕಥನ ... 15

ಪತ್ರಪುಷ್ಪದ ದೆಹಲಿ ರಂಗೋಲಿ ... 19

ಸುದ್ದಿ ಸಂಗ್ರಹ ... 23


ಭೃಗುವಾಣಿ ತ್ರೈಮಾಸಿಕದಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳ ಪೂರ್ಣ ಜವಾಬ್ದಾರಿಯು ಲೇಖಕರದ್ದೇ ಆಗಿರುತ್ತದೆ, ವಿನಹ ಸಂಪಾದಕ ಮಂಡಳಿಯದಲ್ಲ.

## ಸದಸ್ಯರಲ್ಲಿ ಮನವಿ

ಭೃಗುವಾಣಿ ನಿಮ್ಮ ಪತ್ರಿಕೆ. ನೀವು ಕಳುಹಿಸುವ ಲೇಖನ, ಕವನ, ಸಾಧನೆ-ಪರಿಚಯ, ಫೋಟೋಗ್ರಾಫ್, ಚುಟುಕು, ಹಾಸ್ಯ ಚಟಾಕಿ. ಮೊದಲಾದುವುಗಳಿಗೆ ಪ್ರಥಮ ಪ್ರಾಶಸ್ತ್ಯ. ಅದಲ್ಲದೆ ಸದಸ್ಯರ ಕುಟುಂಬದಲ್ಲಿ ನಡೆದ ಯಾವುದೇ ಸಮಾರಂಭದ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಅಥವಾ ಆಮಂತ್ರಣ ಪತ್ರಿಕೆಯನ್ನು ಕಳುಹಿಸಿದರೆ, ಸುದ್ದಿ-ಸಂಗ್ರಹ ಅಂಕಣದಲ್ಲಿ ಪ್ರಕಟಿಸಲು ಅನುಕೂಲ.

ಭೃಗುವಾಣಿ ಪತ್ರಿಕೆಯಲ್ಲಿ ನಿಮ್ಮದೂ ಪಾಲು ಇರಲಿ.. ಪ್ರಕಟಣೆಗೆ ಪರಿಗಣಿಸಲು ಲೇಖನ ಮತ್ತಿತರ ವಿಚಾರ ಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದಾಗಿದೆ:

ಎಂ. ಸತ್ಯನಾರಾಯಣ ಭಟ್
''ಕೃಷ್ಣ ಕೃಪಾ'', 12/1, 5ನೇ ಮೈನ್, ಇಟ್ಟುಮಡು,
ಬನಶಂಕರಿ 3ನೇ ಸ್ಟೇಜ್, ಬೆಂಗಳೂರು-560 085
E-mail: msbhat1958@gmail.com

# ಪೇಜಾವರ ಶ್ರೀಪಾದರು – ಆಧ್ಯಾತ್ಮದಿಂದ ಸಮಾಜವನ್ನು ಬೆಸೆದ ಅಪೂರ್ವ ಸಂತರು

ಅಪಾರ ವಿದ್ವತ್ತು, ಅಪ್ರತಿಮ ಸಾಧನೆ, ಅಪೂರ್ವ ಸಾಮಾಜಿಕ ಸೇವೆ, ಧಾರ್ಮಿಕ ಹೋರಾಟ, ಸಾಮಾಜಿಕ ಕರ್ತವ್ಯ ನಿರ್ವಹಣೆ ಮೂಲಕ ರಾಷ್ಟ್ರ ಮಾತ್ರವಲ್ಲ ವಿಶ್ವಮಾನ್ಯತೆ ಗಳಿಸಿದವರು ಶ್ರೀ ಪೇಜಾವರ ಮಠಾಧೀಶರಾದ ಪರಮಪೂಜ್ಯ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರು. ಅಸಾಧಾರಣ ವ್ಯಕ್ತಿತ್ವ, ಅಸ್ಖಲಿತ ಪಾಂಡಿತ್ಯ, ಆದರ್ಶ ಜೀವನದೊಂದಿಗೆ ಇಡೀ ವಿಶ್ವವನ್ನೇ ಅಪ್ಪಿಕೊಳ್ಳುವ ಅಂತಃಕರಣದ ವಿಶ್ವೇಶತೀರ್ಥರು ಸನ್ಯಾಸ ಸ್ವೀಕಾರ ಮಾಡಿ ಇದೀಗ 80 ವರ್ಷಗಳು ಸಂದಿವೆ.

ಪೇಜಾವರ ಮಠದ 33ನೇ ಯತಿಯಾಗಿರುವ ಶ್ರೀಪಾದರು ಕ್ರಾಂತಿಕಾರಿಗಳಲ್ಲಿ ಸಂಪ್ರದಾಯವಾದಿ, ಸಂಪ್ರದಾಯವಾದಿಗಳಲ್ಲಿ ಕ್ರಾಂತಿಕಾರಿ ಎಂದು ಜನಮಾನ್ಯರಾಗಿದ್ದಾರೆ, ಮಾಧ್ವ ಜನತೆಯ ಅಶೋತ್ತರ ಈಡೇರಿಸಲು ಮಾಧ್ವ ಮಹಾಮಂಡಲ, ಮಾಧ್ವ ವಾಙ್ಮಯ ಅಧ್ಯಯನಕ್ಕಾಗಿ ಬೆಂಗಳೂರಿನಲ್ಲಿ ಪೂರ್ಣಪ್ರಜ್ಞ ವಿದ್ಯಾಪೀಠ, ಮಾಧ್ವ ತತ್ವಜ್ಞಾನ ಪ್ರಸಾರಕ್ಕಾಗಿ ತತ್ವವಾದ ಮಾಸ ಪತ್ರಿಕೆ, ನಾನಾ ಜನರ ಶುಶ್ರೂಷೆಗಾಗಿ ಜನತಾ ಕಲ್ಯಾಣ ನಿಧಿ, ಸೇವಾಶ್ರಮ ಆಸ್ಪತ್ರೆ, ನಿರಂತರ ಸಮ್ಮೇಳನ ಜ್ಞಾನ ಸತ್ರ, ವಿದ್ಯಾರ್ಥಿ ನಿಲಯಗಳು, ಪುಣ್ಯಕ್ಷೇತ್ರಗಳಲ್ಲಿ ಪ್ರವಾಸಿಗರ ಅನುಕೂಲಕ್ಕಗಿ ವಸತಿ ವ್ಯವಸ್ಥೆ ಇವೆಲ್ಲವೂ ಸ್ವಾಮೀಜಿಯವರ ಸಾಮಾಜಿಕ ಸಾಧನೆಗೆ ಕೆಲವು ನಿದರ್ಶನಗಳು.

ಉಡುಪಿಯಲ್ಲಿ ಐದು ಪರ್ಯಾಯಗಳನ್ನು ಯಶಸ್ವಿಯಾಗಿ ನಿರ್ವಹಿಸಿ, ಐತಿಹಾಸಿಕ ದಾಖಲೆಯನ್ನು ನಿರ್ಮಿಸಿದ ಪೂಜ್ಯಶ್ರೀಗಳು ತಮ್ಮ ಪಂಚಮ ಪರ್ಯಾಯದಲ್ಲಿ ಕೃಷ್ಣಮಠದ ಸುತ್ತು ಪೌಳಿ ನವೀಕರಣ, ರಾಜಾಂಗಣದ ಮೇಲೆ ಮಧ್ವಾಂಗಣ ಹೀಗೆ ಹತ್ತು ಹಲವು ಉಪಯುಕ್ತ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಶ್ರೀಕೃಷ್ಣನಿಗೆ ಅರ್ಪಿಸಿರುತ್ತಾರೆ.

ಪೂಜ್ಯ ಶ್ರೀ ವಿಶ್ವೇಶತೀರ್ಥರು ಸನ್ಯಾಸ ದೀಕ್ಷೆ ತೊಟ್ಟು 80 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಶ್ರೀಗಳನ್ನು ಅಭಿವಂದಿಸುವ ಸಲುವಾಗಿ ಉಡುಪಿಗೆ ಆಗಮಿಸಿದ ಭಾರತದ ಘನತೆವೆತ್ತ ರಾಷ್ಟ್ರಪತಿಯವರಾದ ಸನ್ಮಾನ್ಯ ರಾಮನಾಥ ಕೋವಿಂದ್‌ರವರು 88ರ ಹರೆಯದಲ್ಲೂ ಪೇಜಾವರ ಶ್ರೀಗಳ ಲವಲವಿಕೆ, ಉತ್ಸಾಹದ ಜೀವನ ಅಚ್ಚರಿ ಮೂಡಿಸಿದೆ ಎಂದು ಹೇಳಿ ಪೇಜಾವರ ಶ್ರೀಗಳು ಶತಮಾನ ಬಾಳಬೇಕು, ಸಮಾಜಕ್ಕೆ ನಿರಂತರ ಮಾರ್ಗದರ್ಶನ ನೀಡಬೇಕು ಎಂದು ಆಶಿಸಿದ್ದಾರೆ.



ಜನಮಾನಸದಲ್ಲಿ 'ತಿರುಗಾಡುವ ದೇವರು' ಎಂದೇ ಪ್ರಸಿದ್ಧವಾಗಿರುವ ಪೂಜ್ಯ ಶ್ರೀಗಳು ಸುದೀರ್ಘಕಾಲ ಸಮಾಜಕ್ಕೆ ಮಾರ್ಗದರ್ಶನ ನೀಡಿ, ಜನತಾ ಸೇವೆಯ ಮೂಲಕ ಜನಾರ್ದನದ ಸೇವೆ ಮಾಡುವಂತಾಗಲಿ ಎಂದು ಶ್ರೀಕೃಷ್ಣ ಪರಮಾತ್ಮನಲ್ಲಿ ಆನಂದ ಬಳಗದ ಪ್ರಾರ್ಥನೆ.

# ಬಳಗದ ಕ್ಯಾಲೆಂಡರ್ 2019 ಬಿಡುಗಡೆ

ಆನಂದಬಳಗದ ಯುವ ವಿಭಾಗವು ಕಳೆದ ಕೆಲವು ವರ್ಷಗಳಿಂದ ಆನಂದ ಬಳಗ ಕ್ಯಾಲೆಂಡರ್‌ನ್ನು ಹೊರ ತರುತ್ತಿದ್ದು 2019ರ ಕ್ಯಾಲೆಂಡರ್‌ನ್ನು ದಿ.8.12.2018 ರಂದು ಬಿಡುಗಡೆ ಮಾಡಲಾಯಿತು. ಅಂದು ಹೋಟೆಲ್



ಅಜಂತಾದಲ್ಲಿ ನಡೆದ ಕಾರ್ಯಕಾರಿ ಸಮಿತಿಯ ಮಾಸಿಕ ಸಭೆಯ ಸಂದರ್ಭದಲ್ಲಿ ಬಳಗದ ಅಧ್ಯಕ್ಷೆ ಶ್ರೀಮತಿ ಗೀತಾ ವಾಸುದೇವ ರಾವ್‌ರವರು ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಪಿ.ಎಸ್. ಬಾಗಿಲ್ತಾಯ, ಉಪಾಧ್ಯಕ್ಷರಾದ ಶ್ರೀ ಬಾ. ರಾಮಚಂದ್ರ ಉಪಾಧ್ಯ ಮತ್ತು ಶ್ರೀಮತಿ ವಿಜಯ ಲಕ್ಷ್ಮಿ ಭಟ್ ಮತ್ತಿತರ ಗಣ್ಯರ ಸಮ್ಮುಖದಲ್ಲಿ ಬಿಡುಗಡೆಗೊಳಿಸಿದ ಈ ಕ್ಯಾಲೆಂಡರ್ ಅತ್ಯಾಕರ್ಷಕವಾಗಿ ರೂಪುಗೊಂಡಿದ್ದು, ಸದಸ್ಯರ ಮೆಚ್ಚುಗೆಗೆ ಪಾತ್ರವಾಗಿದೆ. ದ.ಕ. ಜಿಲ್ಲೆಗೆ ಸಂಬಂಧಪಟ್ಟ ದೇವರುಗಳ ಚಿತ್ರಗಳೊಂದಿಗೆ ಈ ವರ್ಷ ಯಕ್ಷಗಾನ, ಕಂಬಳ, ನಾಗಮಂಡಲ, ಆಟಿ ಕೆಳಂಜ, ಉತ್ಸವದ ಬಲಿ, ರಂಗಪೂಜೆ ಭೂತದ ಕೋಲ – ಹೀಗೆ ಕರಾವಳಿ ವೈಶಿಷ್ಟ್ಯಗಳ ಚಿತ್ರಗಳನ್ನೂ ಒಳಗೊಂಡ ಕ್ಯಾಲೆಂಡರ್ ಪ್ರಕಟಣೆಗಾಗಿ 22 ಜಾಹೀರಾತುದಾರರು ಸಹಕರಿಸಿದ್ದು, ಈ ಜಾಹೀರಾತುದಾರರ ಉದಾರತೆ ಯಿಂದಾಗಿ ಸರ್ವಮಾಹಿತಿಗಳನ್ನು ಒಳಗೊಂಡು ಅತ್ಯುಪಯುಕ್ತವಾಗಿರುವ ಕ್ಯಾಲೆಂಡರ್‌ಗಳನ್ನು ಸದಸ್ಯರಿಗೆ ಉಚಿತವಾಗಿ ನೀಡಲು ಸಾಧ್ಯವಾಗಿದೆ. ಜಾಹೀರಾತು ದಾರರಿಗೆ ಮತ್ತು ಯುವವಿಭಾಗದ ಕಾರ್ಯತಂಡಕ್ಕೆ ಅಭಿನಂದನೆಗಳು.

***



## ಶ್ರೀ ಯು.ಬಿ. ವೆಂಕಟೇಶ್
## ವಿಧಾನ ಪರಿಷತ್ ಸದಸ್ಯರಾಗಿ ನೇಮಕ

ಆನಂದ ಬಳಗದಲ್ಲಿ 2010–2012 ಮತ್ತು 2012–2014ರ ಅವಧಿಗೆ ಉಪಾಧ್ಯಕ್ಷರಾಗಿ ಗಣನೀಯ ಸೇವೆಸಲ್ಲಿಸಿದ್ದ ಬಳಗದ ಪೋಷಕರು ಹಾಗೂ ಸದಾ ಹಿತೈಷಿಗಳಾದ ಶ್ರೀ ಯು.ಬಿ. ವೆಂಕಟೇಶ್ ರವರನ್ನು ಕರ್ನಾಟಕ ಸರ್ಕಾರವು ದಿ.30.10.2018 ರಂದು ರಾಜ್ಯದ ವಿಧಾನ ಪರಿಷತ್‌ನ ಸದಸ್ಯರಾಗಿ ನಾಮ ನಿರ್ದೇಶನ ಮಾಡಿದೆ. ಸಂವಿಧಾನದ ಪರಿಚ್ಛೇದ 171ರ ಪ್ರಕಾರ ಸಾರ್ವಜನಿಕ ಕ್ಷೇತ್ರದಲ್ಲಿ ಗಣನೀಯವಾಗಿ ಸೇವೆ ಮಾಡಿದವರನ್ನು ವಿಧಾನ ಪರಿಷತ್‌ಗೆ ನಾಮ ನಿರ್ದೇಶನ ಮಾಡಲು ಅವಕಾಶವಿದ್ದು ಶ್ರೀ ಯು.ಬಿ. ವೆಂಕಟೇಶ್‌ರವರು ಶಿಕ್ಷಣ, ಸಾಂಸ್ಕೃತಿಕ ರಂಗದಲ್ಲಿ ಹಾಗೂ ಸಮಾಜಕ್ಕೆ ಸಲ್ಲಿಸುತ್ತಿರುವ ಅಪಾರ ಸೇವೆಯನ್ನು ಪರಿಗಣಿಸಿ, ಶ್ರೀಯುತರನ್ನು ಎಂ.ಎಲ್.ಸಿ.ಯನ್ನಾಗಿ ಸರ್ಕಾರವು ನೇಮಿಸಿದೆ. ಸನ್ಮಾನ್ಯ ಯು.ಬಿ. ವೆಂಕಟೇಶ್‌ರವರಿಗೆ ಆನಂದ ಬಳಗದ ಹಾರ್ದಿಕ ಅಭಿನಂದನೆಗಳು ಮತ್ತು ಶುಭಾಶಯಗಳು.

## ಆನಂದ ಬಳಗ – ಸದಸ್ಯರ ಡೈರೆಕ್ಟರಿ

**ಸದಸ್ಯರಲ್ಲಿ ಮನವಿ,**

**ಆನಂದ ಬಳಗವು 2013ರಲ್ಲಿ ಹೊರತಂದಿರುವ ಸದಸ್ಯರ ನಿರ್ದೇಶಿಕೆಯನ್ನು ಅಪ್‌ಡೇಟ್ ಮಾಡಿ ಹೊಸ ಡೈರಕ್ಟರಿಯನ್ನು ಪ್ರಕಟಿಸಲು ಪ್ರಸ್ತಾಪಿಸಲಾಗಿದೆ. ಸದಸ್ಯರು ತಮ್ಮ ಮಾಹಿತಿಗಳನ್ನು ಪುಟ 10ರಲ್ಲಿ ನೀಡಿರುವ ನಮೂನೆಯಲ್ಲಿ ಭರ್ತಿ ಮಾಡಿ ಇ–ಮೇಲ್ ಮೂಲಕ ಬಳಗದ ಕಚೇರಿಗೆ ದಿ.28.2.2019ರ ಒಳಗಾಗಿ ನೀಡಲು ಕೋರಲಾಗಿದೆ.**

**ದಿನೇಶ್‌ರಾವ್ ಎಂ., ಸಂಚಾಲಕರು ಮಾಧ್ಯಮ ಮತ್ತು ಸಂವಹನ ವಿಭಾಗ**

# ಅಮೋಘ ಯಶಸ್ಸು ಕಂಡ ಎ.ಪಿ.ಎಲ್. 2018



ಆನಂದಬಳಗದ ಯುವ ವಿಭಾಗವು ಈ ಹಿಂದೆ 2014 ಮತ್ತು 2016ರಲ್ಲಿ ಆಯೋಜಿಸಿದ್ದ ಆನಂದ ಬಳಗ ಪ್ರೀಮಿಯರ್ ಲೀಗ್ (ಎ.ಪಿ.ಎಲ್)ನ ಅಮೋಘ ಯಶಸ್ಸಿನಿಂದ ಉತ್ತೇಜನಗೊಂಡು ಮತ್ತೊಮ್ಮೆ ಎ.ಪಿ.ಎಲ್. 2018ರನ್ನು ಸಂಯೋಜಿಸಿದ್ದು, ಈ ಆವೃತ್ತಿ ಅಮೋಘವಾದ ಯಶಸ್ಸು ಸಾಧಿಸಿದೆ. ಯುವ ವಿಭಾಗದ ಸಂಚಾಲಕರಾದ ಶ್ರೀ ಎಂ.ಕೆ. ಪ್ರಸಾದ್ ಮತ್ತು ಅವರ ಕಾರ್ಯ ತಂಡದ ಮುತುವರ್ಜಿಯಿಂದ ದಿ. 4.11.2018ರಂದು ನಡೆದ ಎ.ಪಿ.ಎಲ್. ನಿಂದಾಗಿ ಬಳಗದ ಅನೇಕ ಯುವಕರನ್ನು ಒಂದೆಡೆ ಸೇರಿಸಲು ಸಾಧ್ಯವಾಗಿದೆ.

ದಿ.4.11.2018ರ ಭಾನುವಾರ ಓಕುಳಿಪುರಂನ ರೈಲ್ವೇ ಕ್ರೀಡಾಂಗಣದಲ್ಲಿ ದಿನಪೂರ್ತಿ ನಡೆದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಬಳಗದ ಸದಸ್ಯರೇ ಪ್ರಾಯೋಜಿಸಿರುವ ಎಂಟು ತಂಡಗಳು ಪ್ರತಿಷ್ಠಿತ ಪ್ರಶಸ್ತಿಗಾಗಿ ಸೆಣಸಾಡಿ ಅಂತಿಮವಾಗಿ ಶ್ರೀ ಪಿ.ಸಿ. ರಾವ್ ಪ್ರಾಯೋಜಕತ್ವದ ಐಡಿಯಲ್ ಪಂಟರ್ಸ್ ತಂಡ ವಿಜಯೀ ತಂಡವಾಗಿ ಹೊರಹೊಮ್ಮಿದೆ (ಶ್ರೀ ವೈಶಾಖ್ ಭಾರ್ಗವ್ ನಾಯಕತ್ವದ ಈ ಜಯಶಾಲಿ ತಂಡದ ಸದಸ್ಯರ ಹೆಸರುಗಳನ್ನು ಅಂಕಣದಲ್ಲಿ ನೀಡಲಾಗಿದೆ).

ಶ್ರೀ ಅಡಿಗಳ್ ಮನೋಹರ್ ಭಟ್ ರವರ ಮಾಲಿಕತ್ವದ ಹಾಗೂ ಶ್ರೀ ಮನೋಹರ್ ಅಡಿಗರ್ ನಾಯಕತ್ವದ ರಾಯಲ್ ಅಡಿಗಳ್ಸ್ ತಂಡ ರನ್ನರ್ ಅಪ್ ಸ್ಥಾನ ಗಿಟ್ಟಿಸಿದರು. ಅಂದು ಬೆಳಿಗ್ಗೆ ಪಂದ್ಯಾವಳಿಯನ್ನು ಬಳಗದ ಅಧ್ಯಕ್ಷೆ ಶ್ರೀಮತಿ ಗೀತಾ ವಾಸುದೇವ ರಾವ್‌ರವರು, ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಪಿ.ಎಸ್. ಬಾಗಿಲ್ತಾಯ, ಉಪಾಧ್ಯಕ್ಷರಾದ ಶ್ರೀ ಬಿ. ರಾಮಚಂದ್ರ ಉಪಾಧ್ಯ ಮತ್ತು ಇತರ ಗಣ್ಯರ ಸಮ್ಮುಖದಲ್ಲಿ ಮೂರು ಬಣ್ಣದ ಬಲೂನ್‌ಗಳ ಗುಚ್ಛವನ್ನು ಆಗಸಕ್ಕೆ ಬಿಡುಗಡೆ ಮಾಡುವುದರ ಮೂಲಕ ಉದ್ಘಾಟಿಸಿದರು. ಆರು ಓವರ್‌ಗಳ ಮ್ಯಾಚ್ ದಿನಪೂರ್ತಿ ಆಡಿದ್ದು, ಬಳಗದಲ್ಲಿರುವ ಸುಪ್ತವಾದ ಕ್ರಿಕೆಟ್ ಪ್ರತಿಭೆ ಪ್ರಕಟವಾಗಲು ಈ ಪಂದ್ಯಗಳು ಸಹಕಾರಿಯಾಗಿದೆ.

### ಎ.ಪಿ.ಎಲ್.ನಲ್ಲಿ ಮಿಂಚಿದವರು

ವಿನ್ನರ್ಸ್ : **ಐಡಿಯಲ್ ಪಂಟರ್ಸ್**

ರನ್ನರ್ಸ್ : **ರಾಯಲ್ ಅಡಿಗಳ್ಸ್**

ಮ್ಯಾನ್ ಆಫ್‌ದ ಟೂರ್ನಮೆಂಟ್ : **ಶ್ರೀ ರವೀಂದ್ರ ಎಸ್**

ಅತ್ಯುತ್ತಮ ಬೌಲರ್ : **ಶ್ರೀ ಅನಂತ್ ಕೆ.ಪಿ.**

ಅತ್ಯುತ್ತಮ ಫೀಲ್ಡರ್ಸ್ : **ಶ್ರೀ ರಜತ್ ಭಟ್**

ಅತ್ಯುತ್ತಮ ಬ್ಯಾಟ್ಸ್‌ಮನ್ : **ಶ್ರೀ ಕಿರಣ್**

ಹೆಚ್ಚು ಸಂಖ್ಯೆಯ ಸಿಕ್ಸರ್ಸ್ : **ಶ್ರೀ ಕಿರಣ್**

ಹೆಚ್ಚು ಸಂಖ್ಯೆಯ ಬೌಂಡರಿ : **ಶ್ರೀ ರಾಘವೇಂದ್ರ ಆಚಾರ್ಯ**







ಎ.ಪಿ.ಎಲ್. ನಿರೀಕ್ಷಿತ ಮಟ್ಟದಲ್ಲಿ ಯಶಸ್ಸಾಗಲು ಹಲವು ಮಹನೀಯರು ಕಾರಣಕರ್ತರಾದರೂ, ಪ್ರಮುಖವಾಗಿ ಪ್ರಧಾನ ಪ್ರಾಯೋಜಕತ್ವವನ್ನು ವಹಿಸಿಕೊಂಡು ಎ.ಪಿ.ಎಲ್.ಗೆ ಉದಾರವಾಗಿ ಬೆಂಬಲ ನೀಡಿದ ಹೋಟೆಲ್ ಅಜಂತಾದ ಮಾಲಿಕರಾದ ಶ್ರೀ ಪಿ.ಎಸ್. ಬಾಗಿಲ್ತಾಯರಿಗೆ ಹಾಗೂ ಪ್ರಾಯೋಜಕರಾದ ಶ್ರೀ ಶ್ರೀನಿವಾಸರಾವ್, ಶ್ರೀಮತಿ ಕಸ್ತೂರಿ ಐತಾಳ್, ಶ್ರೀ ದಿನೇಶ್ ಎಂ. ರಾವ್, ಶ್ರೀ ದೇವಿ ಪ್ರಸಾದ್ ಮತ್ತು ಶ್ರೀ ಪ್ರಶಾಂತ್‌ರವರಿಗೆ ಮೆಚ್ಚುಗೆ ಸಲ್ಲಲೇಬೇಕು. ಎ.ಪಿ.ಎಲ್‌ನ 2018 ಆವೃತ್ತಿಯ ಯಶಸ್ಸಿಗೆ ಶ್ರಮಿಸಿದ ಯುವ ವಿಭಾಗದ ಸಂಚಾಲಕರಾದ ಶ್ರೀ ಎಂ.ಕೆ. ಪ್ರಸಾದ್, ಪಂದ್ಯಾವಳಿಯ ಮುಖ್ಯ ಸಂಯೋಜಕರಾದ ಶ್ರೀ ಎಂ.ಕೆ. ಗುರುಮೂರ್ತಿ ಮತ್ತು ಅವರ ಕ್ರಿಯಾಶೀಲ ಕಾರ್ಯತಂಡಕ್ಕೆ ಅಭಿನಂದನೆಗಳು.

## ಎ.ಪಿ.ಎಲ್. 2018 ವಿಜಯಶಾಲಿ ತಂಡ

ಪ್ರಾಯೋಜಕರು : ಶ್ರೀ ಪಿ.ಸಿ. ರಾವ್

ಐಕಾನ್ ಪ್ಲೇಯರ್ : ಶ್ರೀ ವೈಶಾಖ್ ಭಾರ್ಗವ್

ಆಟಗಾರರು : ಸರ್ವಶ್ರೀ, ರವೀಂದ್ರ ಶ್ರೀಧರ್, ಅನಂತ, ರಾಘವೇಂದ್ರ ಆಚಾರ್ಯ, ಶ್ರೀಕಾಂತ ವೈದ್ಯ, ರೋಹನ್ ಕೆ. ಹೆಚ್., ಅಜಯ್ ಆರ್, ಶ್ರೇಯಸ್ ಎಸ್. ಆರ್., ದೀಪಕ್ ಆರ್. ರಾವ್, ವಿನೀತ್ ಕೆ.ಆರ್., ಧೀರಜ್ ಮಡಿ, ವಸುಧರ್ ಭಟ್, ನಿಪುಣ್ ಬಿ.ಎಲ್. ಮತ್ತು ಕೀರ್ತಿ ರಾಜ್

## ದಕ್ಷಿಣ ಕನ್ನಡಿಗರ ಸಂಘ ಬೆಂಗಳೂರು

ದಕ್ಷಿಣ ಕನ್ನಡಿಗರ ಸಂಘದ ಆಶ್ರಯದಲ್ಲಿ ಯುಗಾದಿ ಸಂಭ್ರಮ ಹಾಗೂ ಅರುವತ್ತರ ಆಚರಣೆ ಸಮಾರಂಭವು ದಿ. 21.4.2019ರ ಭಾನುವಾರ ಕೆಂಪೇಗೌಡ ರಸ್ತೆಯಲ್ಲಿರುವ ಎಫ್.ಕೆ.ಸಿ.ಸಿ.ಐ. ಸಭಾಂಗಣದಲ್ಲಿ ಅದ್ದೂರಿಯಿಂದ ನಡೆಯಲಿದೆ. ಎಲ್ಲರಿಗೂ ಸ್ವಾಗತ !

(ಆಮಂತ್ರಣ ಪತ್ರಿಕೆ ಸಕಾಲದಲ್ಲಿ ಸಂಘದ ಸದಸ್ಯರ ಕೈ ಸೇರಲಿದೆ)

## ಜನಾರ್ದನ ಧಾಮ (ಪಿತೃಶಾಲೆ) – ಮನವಿ

ಆಸ್ತಿಕ ಸಮಾಜಕ್ಕೆ ಅನಿವಾರ್ಯದ ಅಗತ್ಯವಾದ ಪಿತೃಕರ್ಮದ ಆಚರಣೆಗೆ ಪೂರಕವಾದ ವ್ಯವಸ್ಥೆಯನ್ನು ಬೆಂಗಳೂರು ನಗರದಲ್ಲಿ ರೂಪಿಸುವ ಸಲುವಾಗಿ ಪರಮಪೂಜ್ಯ ಶ್ರೀ ಪೇಜಾವರ ಶ್ರೀಪಾದರ ಆದೇಶದ ಮೇರೆಗೆ ಪೂರ್ಣಪ್ರಜ್ಞ ವಿದ್ಯಾಪೀಠ ಪ್ರತಿಷ್ಠಾನವು ಪಿತೃ ಶಾಲೆ ನಿರ್ಮಾಣದ ಯೋಜನೆಯನ್ನು ಕೈಗೆತ್ತಿಕೊಂಡಿದೆ.

ಸುಮಾರು ನಾಲ್ಕು ಕೋಟಿ ರೂಗಳ ಅಂದಾಜು ವೆಚ್ಚದಲ್ಲಿ ನಾಲ್ಕು ಅಂತಸ್ತಿನ ಅಪರ ಕರ್ಮಕ್ಕೆ ಅನುಗುಣವಾಗುವ ಯೋಜನೆಯನ್ನು ಸಿದ್ಧಗೊಳಿಸಿದ್ದು ಆನಂದ ಬಳಗದ ಸದಸ್ಯರೂ ಸೇರಿದಂತೆ ಭಕ್ತಾಭಿಮಾನಿಗಳು ಉದಾರ ದೇಣಿಗೆಯನ್ನು ನೀಡಿ ಈ ಅತ್ಯಗತ್ಯ ಯೋಜನೆಯು ಸಾಕಾರವಾಗಲು ಸಹಕರಿಸಬೇಕಾಗಿ ಕೋರಲಾಗಿದೆ.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ
**ಪೂರ್ಣಪ್ರಜ್ಞ ವಿದ್ಯಾಪೀಠ ಪ್ರತಿಷ್ಠಾನ (ರಿ)**
ಡಾ. ಶ್ರೀ ವಿಶ್ವೇಶತೀರ್ಥ ಸ್ವಾಮೀಜಿ ಮಾರ್ಗ
ಕತ್ತರಿಗುಪ್ಪೆ ಮುಖ್ಯರಸ್ತೆ, ಬೆಂಗಳೂರು – 560 028
ದೂರವಾಣಿ: 080 26693974 / 26791236

# ನಮ್ಮಾನಂದ ಬಳಗದ ಒಂದು ದಿನದ ಪ್ರವಾಸ

ಪ್ರತಿ ವರುಷದಂತೆ ಈ ಬಾರಿಯೂ ಡಿಸೆಂಬರ್ 25ರಂದು ಆನಂದ ಬಳಗದಿಂದ ಒಂದು ದಿನದ ಪ್ರವಾಸ ಹೊರಟೆವು. ಧನುರ್ಮಾಸದ ಬೆಳಗ್ಗಿನ ಚಳಿಯಲ್ಲಿ, ಬಿಸಿ ಬಿಸಿ ಕಾಫಿಯನ್ನು ಕುಡಿದು, ವುಡ್‌ಲ್ಯಾಂಡ್ಸ್ ಹೋಟೆಲ್‌ನಿಂದ ನಮ್ಮ ಬಸ್ಸು ಬೆಳಿಗ್ಗೆ, ಸುಮಾರು 7.15 ಗಂಟೆಗೆ ವಿನಾಯಕನ ಪ್ರಾರ್ಥನೆಯೊಂದಿಗೆ ಹಾಗೂ ನಮ್ಮ ಬಸ್ಸಿನ ಸಾರಥಿಯ ಜಯಕಾರದ ಘೋಷಣೆಯೊಂದಿಗೆ ರಾಮನಗರದ ಕಡೆಗೆ ಹೊರಟಿತು. ಸುಮಾರು 9 ಗಂಟೆ ವೇಳೆಗೆ ರೇವಣ ಸಿದ್ಧೇಶ್ವರ ಬೆಟ್ಟ ತಪ್ಪಲಿನಲ್ಲಿರುವ ದಾಸೋಹ ಭವನವನ್ನು ತಲುಪಿದೆವು. ಅಲ್ಲಿ ಸ್ಥಳದ ಕಿರು ಪರಿಚಯವನ್ನು ತಿಳಿದುಕೊಂಡು, ನಮ್ಮ ಬೆಳಗ್ಗಿನ ಉಪಹಾರವನ್ನು ಮುಗಿಸಿ ಬೆಟ್ಟವನ್ನು ಹತ್ತಲು ಅಣಿಯಾದೆವು.

ಈ ಬೆಟ್ಟವು ಸಮುದ್ರದಿಂದ ಸುಮಾರು 3066 ಅಡಿ ಎತ್ತರದಲ್ಲಿದೆ. ಇದು ಒಂದು ಏಕಶಿಲಾ ಬೆಟ್ಟವಾಗಿದೆ. ಚಾರಣಿಗರು ಇಷ್ಟಪಡುವ ಒಂದು ಭವ್ಯವಾದ ಸ್ಥಳ. ವೀರಶೈವ ಸಂಸ್ಥಾಪಕರಾದ ಜಗದ್ಗುರು ಶ್ರೀ ರೇಣುಕಾಚಾರ್ಯರ ಅನುಯಾಯಿಗಳಾದ ಶ್ರೀ ರೇವಣ ಸಿದ್ಧೇಶ್ವರರು ಭಾರತಾದ್ಯಂತ ಸಂಚರಿಸಿ "ಸರ್ವೇ ಜನಾಃ ಸುಖಿನೋ ಭವಂತು" ಎಂಬ ವಾಕ್ಯದಂತೆ ಬಡವರಿಗೆ, ದಲಿತರಿಗೆ, ಅಶಕ್ತರಿಗೆ ಸಹಾಯ ಮಾಡಿ ಸಮಾನತೆ ಹಾಗೂ ಜಾತ್ಯಾತೀತೆಯನ್ನು ಸ್ಥಾಪಿಸಿದರು. ಬೆಟ್ಟದ ತಪ್ಪಲಿನಲ್ಲಿ ರೇಣುಕಾಂಬ ಹಾಗೂ ಮಧ್ಯದಲ್ಲಿ ಭೀಮೇಶ್ವರಿ ದೇವಸ್ಥಾನಗಳಿವೆ. ರೇವಣ ಸಿದ್ಧೇಶ್ವರರು ತನ್ನ ಶಿವಭಕ್ತಿಯ ಸಂಚಾಲನೆಯಲ್ಲಿ ಈ ಬೆಟ್ಟದಲ್ಲಿ ನೆಲೆಸಿದ್ದರು. ಭಗವಾನ್ ಶಿವನು ತನ್ನ ಗಂಗಾಧರೇಶ್ವರ ಹಾಗೂ ಚಂದ್ರಶೇಖರ ಅಂಶವನ್ನು ಇವರಿಗೆ ಕರುಣಿಸಿದನು ಎಂಬ ಪ್ರತೀತಿ ಇದೆ. ಕೊನೆಯಲ್ಲಿ ಹೈದರಾಬಾದಿನಲ್ಲಿರುವ ಕೊಲ್ಲಿಯಲಿ ಸಾಕ್ಷಿ ಕ್ಷೇತ್ರದಲ್ಲಿ ಶಿವನ ಇಚ್ಛೆಯಂತೆ ಲಿಂಗೈಕ್ಯರಾದರು. ರಾಮನಗರದ ಅವ್ವಸಿಕೇ ಹಳ್ಳಿಯಲ್ಲಿ ಅನುಷ್ಠಾನ ಮಾಡಿದ ಸ್ಥಳವೇ ರೇವಣ ಸಿದ್ಧೇಶ್ವರ ಬೆಟ್ಟ. ಭಕ್ತರ ಅಭಿಲಾಷೆಯನ್ನು ಈಡೇರಿಸುವ ಒಂದು ಪವಿತ್ರವಾದ ಸ್ಥಳ ಎಂಬ ನಂಬಿಕೆ ಇದೆ. ಹಿರಿಯರು, ಕಿರಿಯರು, ಮಕ್ಕಳು ಎನ್ನದೆ ಎಲ್ಲರೂ ಈ ಬೆಟ್ಟವನ್ನು ಆಯಾಸವಿಲ್ಲದೆ ಹತ್ತಿ ಇಳಿದಿದ್ದೇ ಇದಕ್ಕೆ ಸಾಕ್ಷಿ. ರಾಮನಗರದಿಂದ ನಮ್ಮ ಪಯಣ ಚನ್ನಪಟ್ಟಣದ ಮಳೂರಿನತ್ತ ಸಾಗಿತು.



ಮಳೂರಿನ ರಾಮಾ ಪ್ರಮೇಯ ಸ್ವಾಮಿ ದೇವಸ್ಥಾನ ಒಂದು ಪುರಾತನ ದೇವಸ್ಥಾನ. ಸಾಮಾನ್ಯವಾಗಿ ಮಧ್ಯಾಹ್ನ 12ಕ್ಕೆ ಬಾಗಿಲು ಹಾಕುವ ಈ ದೇವಸ್ಥಾನ, ಅಂದು 1 ಗಂಟೆಯವರೆಗೆ ತೆರೆದಿದ್ದೇ ನಮ್ಮೆಲ್ಲರ ಪುಣ್ಯ. ರಾಮಾ ಪ್ರಮೇಯ ಸ್ವಾಮಿ, ಅರವಿಂದವಳ್ಳಿ ಹಾಗೂ ಅಂಬೆಗಾಲು ಕೃಷ್ಣನ ದರ್ಶನವನ್ನು ಪಡೆದವು. ಪುರಂದರ ದಾಸರು ತಮ್ಮ 'ಜಗದೋದ್ಧಾರನ ಆಡಿಸಿದಳು ಯಶೋದೆ" ಎಂಬ ಕೃತಿಯನ್ನು ಈ ಅಂಬೆಗಾಲಿನ ಕೃಷ್ಣನ ದರ್ಶನದಿಂದ ಪ್ರೇರಣೆಯಿಂದ ಬರೆದರು ಎಂಬ ಪ್ರತೀತಿ ಇದೆ. ಮಕ್ಕಳಾಗದ ದಂಪತಿಗಳು ಇಲ್ಲಿ ಹರಕೆಯನ್ನು ಹೊತ್ತು, ಮಕ್ಕಳನ್ನು ಪಡೆದಿರುವ ಅನೇಕ ಉದಾಹರಣೆಗಳಿವೆ. ಈ ದೇವಸ್ಥಾನವು 11ನೇ ಶತಮಾನದ ಚೋಳರಾಜನಾದ ರಾಜೇಂದ್ರ ಸಿಂಹನಿಂದ ನಿರ್ಮಿಸಲ್ಪಟ್ಟಿದೆ. ಈ ದೇವಸ್ಥಾನವು ಕಣ್ವ ನದಿಯ ತೀರದಲ್ಲಿದೆ. ನಂತರ ಇಲ್ಲಿಂದ ನಮ್ಮ ಪಯಣವು ಮದ್ದೂರಿನ ಆತ್ಮಲಿಂಗ ದೇವಸ್ಥಾನದ ಕಡೆಗೆ ಸಾಗಿತು. ಮಧ್ಯಾಹ್ನದ ಸಮಯವಾಗಿದ್ದರಿಂದ ದೇವಸ್ಥಾನದ ಬಾಗಿಲು ಹಾಕಿತ್ತು. ಉಡುಪಿಯ ಶ್ರೀಕೃಷ್ಣನನ್ನು ಕನಕನ ಕಿಂಡಿಯಲ್ಲಿ ನೋಡಿದ ಹಾಗೆ, ಆತ್ಮಲಿಂಗವನ್ನು ಬಾಗಿಲ ಕಿಂಡಿಯಿಂದ ನೋಡಿ ಸಂತೋಷಪಟ್ಟೆವು. ಬೆಟ್ಟ ಹತ್ತಿ ಇಳಿದಿದ್ದರಿಂದ ಎಲ್ಲರಿಗೂ ಸಹಜವಾಗಿಯೇ ಬಹಳ ಹೊಟ್ಟೆ ಹಸಿವಾಗಿತ್ತು. ಆತ್ಮಲಿಂಗದ ದರ್ಶನದ ನಂತರ ಅಲ್ಲಿರುವ ಭೋಜನ ಶಾಲೆಯಲ್ಲಿ ನಮ್ಮ ಸೊಗಸಾದ ಭೋಜನವನ್ನು ಮಾಡಿದೆವು. ಅಲ್ಲಿಂದ ನಮ್ಮ ಪಯಣ ಕೆ.ಆರ್.ಎಸ್. ಹಿನ್ನೀರಿನಲ್ಲಿರುವ ವೇಣು ಗೋಪಾಲಸ್ವಾಮಿ

ದೇವಸ್ಥಾನದ ಕಡೆಗೆ ಸಾಗಿತು. ಬಸ್ಸಿನಲ್ಲಿ ಹೌಸಿ ಆಟವನ್ನು ಆಡುತ್ತಾ ಸುಮಾರು 5.30ರ ವೇಳೆಗೆ ವೇಣಗೋಪಾಲಸ್ವಾಮಿ ದೇವಸ್ಥಾನವನ್ನು ತಲುಪಿದೆವು.

ಹೊಯ್ಸಳರ ಕಾಲದ ಶಿಲನ್ಯಾಸ ಹೊಂದಿರುವ ಈ ದೇವಸ್ಥಾನವು 12ನೇ ಶತಮಾನಕ್ಕೆ ಸೇರಿದೆ. ಕಾವೇರಿ ನದಿಯಲ್ಲಿ ಮುಳುಗಡೆ ಆಗಿದ್ದ ಈ ದೇವಸ್ಥಾನವನ್ನು 2002ರಲ್ಲಿ ಪುನರ್‌ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ. ಕೆ.ಆರ್.ಎಸ್.ನ ಹಿನ್ನೀರಿನ ಹತ್ತಿರ ನಿರ್ಮಾಣವಾಗಿರುವ ಈ ದೇವಸ್ಥಾನವು ಒಂದು ನಯನಮನೋಹರವಾದ ಸ್ಥಳವಾಗಿದೆ. ಸಂಜೆಯ ಹೊಂಬಣ್ಣದ ಸೂರ್ಯಾಸ್ತಮಾನವನ್ನು ಕಣ್ತುಂಬಿಕೊಂಡು ಅಲ್ಲಿಂದ ನಮ್ಮ ಪಯಣ ಬೆಂಗಳೂರಿಗೆ ಹೊರಟಿತು.

ಈ ಪ್ರವಾಸಕ್ಕಾಗಿ ಸುಮಾರು ಒಂದು ತಿಂಗಳಿನಿಂದ ಆನಂದ ಬಳಗದ ಕಾರ್ಯಕಾರಿ ಸಮಿತಿಯ ಸದಸ್ಯರು ಪಟ್ಟಿರುವ ಶ್ರಮವೆಲ್ಲ ಸಾರ್ಥಕವಾಯಿತು. ಪ್ರವಾಸದಲ್ಲಿ ಭಾಗವಹಿಸಿದ್ದ ಆನಂದ ಬಳಗದ ಎಲ್ಲಾ ಸದಸ್ಯರು ಆನಂದದಿಂದ ಒಂದು ಒಳ್ಳೆಯ ಸವಿನೆನಪನ್ನು ಹೊತ್ತುಕೊಂಡು ಹೊರಟುದುದೇ ಇದಕ್ಕೆ ಸಾಕ್ಷಿಯಾಯಿತು.

**ವರದಿ – ಲಕ್ಷ್ಮಿ .ಪಿ ತಂತ್ರಿ**

***

# ಧಾರ್ಮಿಕ ವಿಭಾಗದಿಂದ ತುಳಸೀ ಸಂಕೀರ್ತನೆ



ಬಳಗದ ಧಾರ್ಮಿಕ ವಿಭಾಗವು ಅದರ ಸಂಚಾಲಕರಾದ ಶ್ರೀ ವೈ. ಜಯಂತರಾವ್ ರವರ ನೇತೃತ್ವದಲ್ಲಿ ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ದಿನಾಂಕ 17.11.2018ರ ಸಂಜೆ ಶ್ರೀ ತುಳಸೀ ಸಂಕೀರ್ತನೆ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಅಂದು ಸಾಯಂಕಾಲ ಸುಮಾರು 6 ಗಂಟೆಗೆ ವಿದ್ಯಾಪೀಠದ ಶ್ರೀ ಕೃಷ್ಣ ದೇಗುಲದ ಮುಂಭಾಗದಲ್ಲಿ ಸಾಲಂಕೃತವಾಗಿರುವ ತುಳಸೀ ಕಟ್ಟೆಯಲ್ಲಿ ಪ್ರಾರಂಭಿಕ ಪೂಜಾ ವಿಧಾನಗಳು ಆದ ನಂತರ ಆನಂದ ಬಳಗದ ಸುಮಾರು 25 ಸದಸ್ಯರು ಲಯಬದ್ಧವಾಗಿ ತುಳಸಿ ಸಂಕೀರ್ತನೆಯನ್ನು ನಡೆಸಿಕೊಟ್ಟರು. ಶ್ರೀ ಪಿ.ಸಿ. ಮುಕುಂದರಾವ್ ಮತ್ತು ಶ್ರೀ ಮಟ್ಟಿ ರಾಮಚಂದ್ರ ರಾವ್‌ರವರ ಮಾರ್ಗದರ್ಶನದಲ್ಲಿ ಮುನಿವರ್ಯ ವಾದಿರಾಜ ಸ್ವಾಮಿಗಳು ರಚಿಸಿರುವ ಲಕ್ಷುಮಿ ನಾರಾಯಣ, ಕಂಡೆ ಕಂಡೆನು ಕೃಷ್ಣ ನಿನ್ನಯ, ರುಗ್ಮ ಭೂಷಣ ಪಾಲಿಸೆನ್ನನು, ದೇವರ ದೇವನೆ ಕಾಯೋ, ಕೇಳು ಕೇಳೆಲೆ ಗೋಪಿ ನಿನ್ನಯ, ದೇವರ ದೇವನೆ ಬಾರೋ, ನೀರೆ ತೋರೆಲೆ ನೀರೆ ತೋರೆಲೆ ಮೊದಲಾದ ಸಂಕೀರ್ತನೆಗಳಿಗೆ ತಾಳ ಹಾಕುತ್ತಾ ಲಯಬದ್ಧವಾಗಿ ಮಾಡಿರುವ ಸಂಕೀರ್ತನೆ ಅತ್ಯಾಕರ್ಷಕವಾಗಿತ್ತು. ಬಳಗದ ಸದಸ್ಯರ ಜೊತೆಗೆ ತೌಳವ ಮಧ್ವಕೂಟದ ಉತ್ಸಾಹೀ ಸದಸ್ಯರು ಬಹಳಷ್ಟು ವಿಧ್ಯುಕ್ತವಾಗಿ ಸಂಕೀರ್ತನೆ ಸೇವೆಯನ್ನು ಮಾಡಿದರಲ್ಲದೆ ವಿದ್ಯಾಪೀಠದ ಕೆಲವು ವಿದ್ಯಾರ್ಥಿಗಳೂ ಸಂಕೀರ್ತನೆಯಲ್ಲಿ ಪಾಲ್ಗೊಂಡಿದ್ದಾರೆ. ಸುಮಾರು 90 ನಿಮಿಷಗಳ ಕಾಲ ಸರಾಗವಾಗಿ ನಡೆದ ಸಂಕೀರ್ತನೆಯ ನಂತರ ಮಹಾ ಮಂಗಳಾರತಿ ಪುಣ್ಯಕಾಲದಲ್ಲಿ ಶ್ರೀ ಪೇಜಾವರ ಮಠಾಧೀಶರಾದ ಪರಮಪೂಜ್ಯ ಶ್ರೀ ಶ್ರೀ ವಿಶ್ವೇಶ್ವರ ತೀರ್ಥ ಶ್ರೀಪಾದರು ಆಗಮಿಸಿ, ತುಳಸೀ ನಾರಾಯಣನಿಗೆ ಮಂಗಳಾರತಿ ಮಾಡಿರುವುದು ಬಳಗದ ಸುಯೋಗ. ತಮ್ಮ ಸಂಕ್ಷಿಪ್ತವಾದ ಅನುಗ್ರಹ ಸಂದೇಶದಲ್ಲಿ ಪೂಜ್ಯ ಶ್ರೀಗಳು ತುಳಸೀ ದಾಮೋದರನ ಆರಾಧನೆ ಮತ್ತು ಸಂಕೀರ್ತನೆಯ ಮಹತ್ವದ ಬಗ್ಗೆ ವಿವರಿಸಿ, ಇಂತಹ ಧಾರ್ಮಿಕ ಕಾರ್ಯಕ್ರಮಗಳನ್ನು ಸದಾ ನಡೆಸುತ್ತಿರುವ ಆನಂದ ಬಳಗವನ್ನು ಶ್ಲಾಘಿಸಿ, ಅನುಗ್ರಹಿಸಿದರು. ಧಾರ್ಮಿಕ ಕಾರ್ಯಕ್ರಮದ ನಂತರ ವಿಶೇಷ ಫಲಾಹಾರದ ವ್ಯವಸ್ಥೆಯನ್ನು ಮಾಡಲಾಗಿತ್ತು.

## ಜನವರಿ – ಏಪ್ರಿಲ್ 2019ರ ವಿಶೇಷ ದಿನಗಳು

| | | |
|---|---|---|
| ಜನವರಿ 14, ಸೋಮವಾರ | – | ಮಕರ ಸಂಕ್ರಮಣ |
| ಜನವರಿ 15, ಮಂಗಳವಾರ | – | ಸೌರ ಮಧ್ವನವಮೀ |
| ಜನವರಿ 17, ಗುರುವಾರ | – | ಸರ್ವೈಕಾದಶೀ |
| ಜನವರಿ 20, ಭಾನುವಾರ | – | ಕ್ರೀಡಾ–ಮಿಲನ 2019 |
| ಜನವರಿ 21, ಸೋಮವಾರ | – | ಹುಣ್ಣಿಮೆ |
| ಜನವರಿ 31, ಗುರುವಾರ | – | ಸರ್ವೈಕಾದಶೀ |
| ಫೆಬ್ರವರಿ 04, ಸೋಮ | – | ಅಮಾವಾಸ್ಯೆ |
| ಫೆಬ್ರವರಿ 05, ಮಂಗಳ | – | ಮಾಘಮಾಸ, ಶಿಶಿರ ಋತು ಆರಂಭ |
| ಫೆಬ್ರವರಿ 12, ಮಂಗಳ | – | ರಥಪಸ್ತಮಿ |
| ಫೆಬ್ರವರಿ 13, ಬುಧವಾರ | – | ಕುಂಭ ಸಂಕ್ರಮಣ |
| ಫೆಬ್ರವರಿ 14, ಗುರುವಾರ | – | ಚಾಂದ್ರ ಮಧ್ವನವಮೀ |
| ಫೆಬ್ರವರಿ 16, ಶನಿವಾರ | – | ಸರ್ವೈಕಾದಶೀ |
| ಫೆಬ್ರವರಿ 19, ಮಂಗಳವಾರ | – | ಹುಣ್ಣಿಮೆ |
| ಮಾರ್ಚ್ 02, ಶನಿವಾರ | – | ಸರ್ವೈಕಾದಶೀ |
| ಮಾರ್ಚ್ 04, ಸೋಮ | – | ಮಹಾಶಿವರಾತ್ರಿ |
| ಮಾರ್ಚ್ 06, ಬುಧವಾರ | – | ಅಮಾವಾಸ್ಯೆ |
| ಮಾರ್ಚ್ 07, ಗುರುವಾರ | – | ಫಾಲ್ಗುಣ ಮಾಸಾರಂಭ |
| ಮಾರ್ಚ್ 14, ಗುರುವಾರ | – | ಮೀನ ಸಂಕ್ರಮಣ |
| ಮಾರ್ಚ್ 17, ಭಾನುವಾರ | – | ಸರ್ವೈಕಾದಶೀ |
| ಮಾರ್ಚ್ 21, ಗುರುವಾರ | – | ಹುಣ್ಣಿಮೆ |
| ಏಪ್ರಿಲ್ 01, ಸೋಮವಾರ | – | ವೈಷ್ಣವೈಕಾದಶೀ |
| ಏಪ್ರಿಲ್ 05, ಶುಕ್ರವಾರ | – | ಅಮಾವಾಸ್ಯೆ |
| ಏಪ್ರಿಲ್ 06, ಶನಿವಾರ | – | ಚಾಂದ್ರಯುಗಾದಿ ವಿಕಾರಿ ಸಂವತ್ಸರ ಆರಂಭ ಚೈತ್ರಮಾಸ, ವಸಂತ ಋತು ಆರಂಭ |
| ಏಪ್ರಿಲ್ 14, ಭಾನುವಾರ | – | ಮೇಷ ಸಂಕ್ರಮಣ |
| ಏಪ್ರಿಲ್ 15, ಸೋಮವಾರ | – | ಸೌರ ಯುಗಾದಿ (ವಿಷು) |
| ಏಪ್ರಿಲ್ 16, ಮಂಗಳವಾರ | – | ವೈಷ್ಣವೈಕಾದಶೀ |
| ಏಪ್ರಿಲ್ 19, ಶುಕ್ರವಾರ | – | ಹುಣ್ಣಿಮೆ |

(ಆಧಾರ : ಪರ್ಯಾಯ ಶ್ರೀ ಪೂರ್ಣಪ್ರಜ್ಞ ಪಂಚಾಗಂ)

## ಬದುಕು ಬೆಳಕನು ಬೆಳಗುವ

ಬನ್ನಿರೆಲ್ಲರು ಒಂದುಗೂಡುತ
ಗೂಡು ದೀಪವ ಹಚ್ಚುವ
ಇರುಳು ಮರೆಸುವ ಬೆಳಕು ಸ್ಫುರಿಸುವ
ಸಂತಸದಿ ತೇಲಾಡುವ

ನರಕ ದೈತ್ಯನ ತರಿದ ಶುಭ ದಿನ
ಚಿಣ್ಣರೆಲ್ಲರ ಹಬ್ಬವು
ಬಗ್ಗಿ ನಮಿಸುವ ಗೋವು ಮಂದೆಗೆ
ಮರೆತು ಹೋಗಲಿ ಬೇಧವು

ಮನದ ತಮವದು ಸರಿದು ಹೋಗಲಿ
ಜ್ಞಾನ ದೀವಿಗೆ ಬೆಳಗಲಿ
ಸುಖದ ಶರಧಿಯ ಓಕುಳಿಯಲಿ
ಬದುಕು ಧನ್ಯತೆ ಪಡೆಯಲಿ

ದಹಿಸಿ ಹೋಗಲಿ ಮನದ ಕಲ್ಮಶ
ಸುಡು ಮದ್ದಿನ ಸಿಡಿ ಶಬ್ದದಿ
ಸಿರಿಲಕ್ಷ್ಮಿ ದೇವಿಯ ಪೂಜೆಯಂದದಿ
ಮಾಡಿ ನಮಿಸುವ ಹರುಶದಿ

ಮನುಜರೆಲ್ಲರ ಮನವ ತುಂಬಲಿ
ಸ್ವಾರ್ಥ ಮರೆಸಿದ ಭಾವನೆ
ಬಲಿಯ ಬದುಕಿನ ತ್ಯಾಗ ಜೀವನ
ಅರ್ಥವಾಗಲಿ ಬೇಗನೆ

ಹಣತೆ ತೊಳೆಯಲಿ ಅಂಧಕಾರವ
ರಾಡಿಯಾಗಿಹ ನಾಡಲಿ
ಮನವ ಬೆಸೆಯುವ, ಬೆರೆತು ಬಾಳುವ
ಬುದ್ಧಿ ಜನರಿಗೆ ನೀಡಲಿ

ದೀಪ ದೀಪದಿ ತತ್ವ ಸಾರುವ
ಹಬ್ಬ ದೀಪಾವಳಿ
ನೀತಿ ತಿಳಿಸುವ ನಿತ್ಯ ನೂತನ
ಸತ್ಯ ಪಥವನು ತೋರಲಿ

ಮನೆ ಮನೆಯಲೂ ಮನ ಮನದಲೂ
ಸಿರಿಯ ಸೊಬಗು ಹೆಚ್ಚಲಿ
ಪ್ರೀತಿ ಸೆರಗನು ಹೊದೆಸಿ ಹರಸುವ
ಬಾಳ ಜ್ಯೋತಿಯು ಬೆಳಗಲಿ

ಬನ್ನಿರೆಲ್ಲರು ಒಂದುಗೂಡುತ
ಗೂಡು ದೀಪವ ಕಟ್ಟುವ
ಇರುಳು ಮರೆಸುವ ಬೆಳಕ ಸ್ಫುರಿಸುವ
ಸಂಭ್ರಮದಿ ಸಾರ್ಥಕವಾಗುವ

ರಚನೆ : ಟಿ.ಎಸ್. ನಾಗರಾಜ ಉಪಾಧ್ಯಾಯ

# ANANDA BALAGA - DIRECTORY FORM

Ananda Balaga proposes to bring out the Members Directory, as an updated version of the earlier Directory published during 2013. All members are requested to fill-up and send the particulars as per the format given below to Balaga by e-mail (anandabalaga.org/directory-link or info@anandabalaga.org)before 28.2.2019. Your cooperation would go a long way in bringing out the proposed Directory.

Affix latest pass port / stamp size photograph

Name :

Father/ Husband's Name :

Membership No :

Membership Type :

Contact details

Landline :

Mobile :

Email :

Date of Birth :

Education :

Profession :

Blood Group :

Residential Address :

PIN Code :

Family Details

Spouse Name :

Children Name/s :

---

Note : If any additional information about your family, which you would like to share, please attach additional sheet

---

For more details contact :

Dinesh Rao M. : 9945688955
Ranjith Yadapadithaya : 9591994646
Ananda Srinivas : 9740187075
Sowmya K.V. : 9886200062
H. Ramesh Bhat : 9845024708

# ಬಳಗದ ಹಿತೈಷಿಗಳಿಗೆ ರಾಜ್ಯೋತ್ಸವ ಪ್ರಶಸ್ತಿ

ಕರ್ನಾಟಕ ಸರ್ಕಾರವು ಪ್ರತಿವರ್ಷ ಕರ್ನಾಟಕ ರಾಜ್ಯ ಪ್ರಶಸ್ತಿಯನ್ನು ನೀಡುತ್ತಿದ್ದು. 2018ರ ರಾಜ್ಯ ಪ್ರಶಸ್ತಿ ಪುರಸ್ಕೃತರಲ್ಲಿ ಬಳಗದ ಪೋಷಕರು ಹಾಗೂ ಹಿತೈಷಿಗಳಾದ ಶ್ರೀ ಪಿ. ರಾಮದಾಸ್ ಮಡಮಣ್ಣಾಯ, ಡಾ.ಪಿ. ಮೋಹನ್‌ರಾವ್ ಮತ್ತು ಡಾ.ಪಿ.ಎಸ್. ಸೀತಾರಾಂ ಭಟ್ ಸೇರಿರುವುದು ಬಳಗಕ್ಕೆ ಹೆಮ್ಮೆಯ ವಿಚಾರ.



ಬೆಂಗಳೂರಿನಲ್ಲಿರುವ ಪ್ರತಿಷ್ಠಿತ ಉದ್ಯಮ ಏಸ್ ಮ್ಯಾನುಫಾಕ್ಚರಿಂಗ್ ಸಿಸ್ಟಮ್ಸ್ ನಲ್ಲಿ ಕಳೆದ 23 ವರ್ಷಗಳಿಂದ ವ್ಯವಸ್ಥಾಪಕ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಆ ಸಂಸ್ಥೆಯ ಯಶಸ್ಸಿನ ರೂವಾರಿಯಾಗಿರುವ ಶ್ರೀ ಪಿ. ರಾಮದಾಸ್ ಮಡಮಣ್ಣಾಯ ರವರು ಏಸ್ ಸಂಸ್ಥೆಯನ್ನು ಸೇರುವ ಮೊದಲು ಹೆಚ್.ಎಂ.ಟಿ. ಮತ್ತು ವಿಡಿಯಾ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದು, ಮೆಷಿನ್ ಟೂಲ್ ಕ್ಷೇತ್ರದಲ್ಲಿ ಅಪಾರ ಪರಿಣತಿ ಮತ್ತು ಅನುಭವವನ್ನು ಹೊಂದಿರುವ ತಂತ್ರಜ್ಞರಾಗಿರುತ್ತಾರೆ. ಏಸ್ ಸಂಸ್ಥೆಯ ಜಾಗತಿಕ ಮಟ್ಟದ ಮನ್ನಣೆಗೆ ಶ್ರೀ ರಾಮದಾಸ್ ನೀಡಿರುವ ಕೊಡುಗೆ ಅಮೋಘ. ತನ್ನ ಉದ್ಯಮದ ಜೊತೆಗೆ ವಿವಿಧ ಸಾಮಾಜಿಕ ಹಾಗೂ ಧಾರ್ಮಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿ ಕೊಂಡಿರುವ ಶ್ರೀ ಮಡಮಣ್ಣಾಯರು ಆನಂದ ಬಳಗದ ಮಹಾ ಪೋಷಕರಲ್ಲಿ ಒಬ್ಬರಾಗಿದ್ದಾರೆ.



ಬೆಂಗಳೂರಿನ ಹಿರಿಯ ಹೃದ್ರೋಗ ತಜ್ಞರಾದ ಡಾ.ಪಿ. ಮೋಹನ್‌ರಾವ್‌ರವರು ಹೆಚ್.ಎ.ಎಲ್. ಸಂಸ್ಥೆಯಲ್ಲಿ ಮೆಡಿಕಲ್ ಡೈರೆಕ್ಟರ್ ಆಗಿ ಸೇವೆ ಸಲ್ಲಿಸಿದ್ದು, ತನ್ನ ನಿವೃತ್ತಿಯ ನಂತರ ಗ್ರಾಮೀಣ ಜನರ ಆರೋಗ್ಯದತ್ತ ಅಪಾರ ಕಾಳಜಿ ವಹಿಸುತ್ತಿದ್ದಾರೆ. ಹೊಸಕೋಟೆಯಲ್ಲಿ ಆಸ್ಪತ್ರೆಯೊಂದನ್ನು ನಡೆಸುತ್ತಿರುವ ಡಾ. ರಾವ್ ಅಸಂಖ್ಯಾತ ಗ್ರಾಮೀಣ ಜನರಿಗೆ ವೈದ್ಯಕೀಯ ಸೇವೆಯನ್ನು ನೀಡುತ್ತಿದ್ದಾರೆ. ಜೊತೆಗೆ ಕಗ್ಗದಾಸಪುರ ಮತ್ತು ಚಿನ್ನಪ್ಪನಹಳ್ಳಿ ಎಂಬ ಎರಡು ಗ್ರಾಮಗಳನ್ನು ದತ್ತು ಪಡೆದುಕೊಂಡಿರುವ ಡಾ. ಮೋಹನ್‌ರಾವ್ ಅಲ್ಲಿಯ ಸಂಪೂರ್ಣ ವೈದ್ಯಕೀಯ ಕಾಳಜಿಯನ್ನು ಕಳೆದ 12 ವರ್ಷಗಳಿಂದ ನಿರ್ವಹಿಸುತ್ತಿದ್ದಾರೆ. ಪ್ರಸಕ್ತ ಎಂ.ವಿ.ಜೆ. ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಕಾರ್ಯನಿರ್ವಹಣಾ ನಿರ್ದೇಶಕರಾಗಿರುವ ಡಾ. ಮೋಹನ್ ರಾವ್‌ರವರ ಸಾಮಾಜಿಕ ಕಳಕಳಿ ಶ್ಲಾಘನೀಯ.



ದೇಶದಲ್ಲಿ ಪ್ರಸಿದ್ಧವಾಗಿರುವ ಬೆಂಗಳೂರಿನ ಜಯದೇವ ಹೃದ್ರೋಗ ಸಂಸ್ಥೆಯಲ್ಲಿ ಹಲವಾರು ವರ್ಷಗಳಿಂದ ಹೃದ್ರೋಗ ತಜ್ಞರಾಗಿ ಸೇವೆ ಸಲ್ಲಿಸುತ್ತಿರುವ ಡಾ.ಪಿ.ಎಸ್. ಸೀತಾರಾಂ ಭಟ್‌ರವರು ನಾಡಿನ ವಿಖ್ಯಾತ ಹೃದ್ರೋಗ ತಜ್ಞರಲ್ಲಿ ಒಬ್ಬರಾಗಿದ್ದಾರೆ. ಜಯದೇವ ಸಂಸ್ಥೆಯಲ್ಲಿ ಮಕ್ಕಳ ಹೃದಯ ಶಸ್ತ್ರಚಿಕಿತ್ಸೆಗಾಗಿ ಪ್ರತ್ಯೇಕ ವಿಭಾಗವನ್ನು ಆರಂಭಿಸಲು ಕಾರಣಕರ್ತರಾದ ಡಾ. ಭಟ್ ರವರು ಅತ್ಯಂತ ಕ್ಲಿಷ್ಟ ಮತ್ತು ಸಂಕೀರ್ಣವಾದ ಹಲವಾರು ಹೃದಯ ಶಸ್ತ್ರ ಚಿಕಿತ್ಸೆಗಳನ್ನು ಯಶಸ್ವಿಯಾಗಿ ಮಾಡಿ, ರೋಗಿಗಳಿಗೆ ಜೀವದಾನ ಮಾಡಿದ್ದಾರೆ. ತನ್ನ ವೃತ್ತಿಯ ಜೊತೆಗೆ ಅನೇಕ ಸಾಮಾಜಿಕ ಸೇವೆಗಳನ್ನು ಮಾಡುತ್ತಿರುವ ಡಾ. ಸೀತಾರಾಂ ಭಟ್‌ರವರು ಗ್ರಾಮೀಣ ಪ್ರದೇಶದಿಂದ ಬಂದ, ಕನ್ನಡ ಮಾಧ್ಯಮದ ಒಬ್ಬ ವಿದ್ಯಾರ್ಥಿ ಹೇಗೆ ವೃತ್ತಿಪರ ಕ್ಷೇತ್ರದಲ್ಲಿ ಉತ್ತುಂಗಕ್ಕೆ ಏರಬಹುದೆಂದು ತೋರಿಸಿದ ಮಾದರಿ ವ್ಯಕ್ತಿಯಾಗಿದ್ದಾರೆ. ಬಳಗಕ್ಕೆ ಕೀರ್ತಿ ತಂದ ಮೂವರು ಮಹನೀಯರಿಗೂ ಹಾರ್ದಿಕ ಅಭಿನಂದನೆಗಳು.

# ಅಹಾ ಸೊನ್ನೆ

ಸೊನ್ನೆಯದು ವಿಚಿತ್ರ ಅಂಕೆ
ಉಳಿದವಕ್ಕಿಂತ ಅದು ವಿಭಿನ್ನ ಅದಕೆ
ಯಾವುದೇ ಸಂಖ್ಯೆಯ ಬಲಕ್ಕಿರಿಸಿ ಸೊನ್ನೆ
ಹತ್ತು ಪಟ್ಟಾಗುವುದದು ಎಂಬುದರ ಸನ್ನೆ

ಸಂಖ್ಯೆಯ ಎಡಕ್ಕಿರಿಸಿ ಈ ಸೊನ್ನೆಯ
ಏರದದು ಗೆಳೆಯಾ ಏನೂ ಕಂಡೆಯಾ
ಬಲ ಎಡ ಸೊನ್ನೆಗಳ ನೋಡಿ ಈ ಬಲಾಬಲ
ಎಚ್ಚರವಿರದಿರೆ ಆಪತ್ತು ಖಾತ್ರಿ ಮಹಾಬಲ

ಪರೀಕ್ಷೆಯಲಿ ವಿದ್ಯಾರ್ಥಿ ಗಳಿಸಲು ಅಂಕ ಸೊನ್ನೆ
ಏರದವನ ಗಾಡಿ ತರಗತಿಯ ದಿನ್ನೆ
ದಾಂಡಿಗ ಗಳಿಸಲು ಓಟ ಸೊನ್ನೆ
ಮುಂದಿನ ಬಾರಿ ಎತ್ತುವರು ಅವನನ್ನೆ

ಸೊನ್ನೆಗೆಂಬರು ಸಂಸ್ಕೃತದಲ್ಲಿ ಶೂನ್ಯ
ಅದೊಂದು ಪ್ರಬಲ ಪರಿಕಲ್ಪನೆ ಅನನ್ಯ
ಗಣಿತಧಾರೆಗೆ ಭಾರತೀಯರ ಕೊಡುಗೆಯಿದು
ಸಂಖ್ಯಾಕಾಶದ ಕಂದಕದ ತುಂಬಿಹಿದು

ಶೂನ್ಯಕೆ ಪರ್ಯಾಯಪದ ಗೌರವಸೂಚಕ ಪೂಜ್ಯ
ಅದರ ಅನರ್ಥದ ಬಳಕೆ ಮಾತ್ರ ವರ್ಜ್ಯ
ಶೂನ್ಯವೆನ್ನಿಯಾ ಸೊನ್ನೆಯೆನ್ನಿ ಅದು ಅದ್ವಿತೀಯ
ಸಂಖ್ಯಾರಾಜ್ಯದಲ್ಲಿ ಅದೇ ರಾಜ ಅಪ್ರಮೇಯ

ದಶಮಾಂಶ ಬಿಂದುವಿನ ಬಲಕ್ಕಿರುವ ಸೊನ್ನೆ
ಹತ್ತರಿಂದ ಸಂಖ್ಯೆಯ ಭಾಗಿಸಿರೆನ್ನುವ ಸನ್ನೆ
ಎಡಕ್ಕಿರುವ ಒಂಟಿ ಸೊನ್ನೆ
ಬರಿಯ ಅಲಂಕಾರಿಕವದೆನ್ನಿ

ಸಂಖ್ಯೆಯೊಂದಕೆ ಗುಣಿಸಿ ಸೊನ್ನೆಯಿಂದ
ಫಲಿತವಾದ ಬರಿಯ ಶೂನ್ಯ ಇದರಿಂದ
ಶೂನ್ಯವಲ್ಲದ ಸಂಖ್ಯೆಗೆ ಭಾಗಿಸಿ ಸೊನ್ನೆಯಿಂದ
ಅನಂತದ ಅದ್ಭುತ ಹೊಮ್ಮುವುದು ಅದರಿಂದ

ಸೊನ್ನೆಗೆ ಭಾಗಿಸಿ ಸೊನ್ನೆಯಿಂದ
ನಡೆಯುವುದು ಚಮತ್ಕಾರ ಇದರಿಂದ
ಇಲ್ಲದ ರೊಟ್ಟಿಯ ಹಂಚಿರಿ ಇಲ್ಲದವರಿಗೆ
ವಂದಿಸಿ ನೀವು ಇದರ ಬಲ್ಲವರಿಗೆ

ಸಂಖ್ಯಾರೇಖೆಯ ಕೇಂದ್ರವೇ ಈ ಸೊನ್ನೆ ಕೇಳಾ
ಎಡಕ್ಕೆ ಋಣಸಂಖ್ಯೆಗಳ ಮಹಾಮೇಳ
ಬಲಕಿದೆ ಧನಸಂಖ್ಯೆಗಳ ಸಾಲೇಸಾಲು
ಇದರ ತಿಳಿಯಿರಿ, ಇದೇ ನಮ್ಮ ಅಹವಾಲು

ಶೂನ್ಯರ ಸಂಗವ ಬಿಟ್ಟುಬಿಡಿ ಎನ್ನುವರು
ಅನುಭವ ಕಂಡಂತಿರುವ ಹಿರಿಯರು
ಮಾಡುವುದದು ನಮ್ಮನೂ ಶೂನ್ಯ
ಸೊನ್ನೆ ಸಾಂಕ್ರಾಮಿಕ ಎಲ್ಲವೂ ಬರಿಯ ಶೂನ್ಯ

ಶೂನ್ಯವೊಂದು ನಿರ್ವಾತ ಕುಹರ ಕೃಷ್ಣಕಂದರ ಖಾಲಿ
ಈರುಳ್ಳಿ ಬಿಡಿಸಿದಂತೆ ಅಂತ್ಯವೇ ಖಾಲಿ
ಜೀವನದ ಧ್ಯೇಯೋದ್ದೇಶ ಅದೇನೇ
ತಿಳಿದವರೆಂಬರು ಶೂನ್ಯಸಂಪಾದನೆ

**– ಡಾ. ಶ್ರೀವೆಂಕಟರಮಣ, ತಲಪಾಡಿ**

# ಅನುಭವಪೂರ್ಣ ವಚನಗಳು

ಮಾತಿನಲ್ಲಿರುವ ಹಿತವಾದ ನುಡಿಗಳು
ಪತನಗೊಳಿಸುವ ಮಾತ ಎಂದಿಗೂ ಆಡದಿರು
ನಿತ್ಯವೂ ನೀ ಒಳಿತನಾಡುತಲಿರುವ ಮಂಕುದಿಣ್ಣೆ

ಮತಿಯಿಲ್ಲದ ಸತಿಯ ರತಿಯಾದರೇನು ಫಲ?
ಅತಿಯಾದ ಆಸೆ, ಧಿಕ್ಕರಿಸಿ ನಡೆವವಳು
ಇತಿಹಾಸದಲಿ ಯಾರೂ ಉದ್ಧಾರವಾದುದಿಲ್ಲ
ಮಂಕುದಿಣ್ಣೆ

ಚಿಕ್ಕಪುಟ್ಟ ಮಾತು ಬರುವುದು ಹೋಗುವುದು
ಅಕ್ಕಪಕ್ಕದ ಜನರ ಪ್ರೀತಿಯನು ನೀಗಳಿಸು
ತಕ್ಕ ಸಮಯದಲಿ ಉಪಕರಿಸುವರವರು ಮಂಕುದಿಣ್ಣೆ

ಚಿಕ್ಕಮಕ್ಕಳು ಎಂದು ಕಡೆಗಣಿಸದಿರು ಅವರ
ಸಿಕ್ಕುವುದು ಅವರಲ್ಲು ತಿಳಿದಿರುವ ವಿಷಯ
ಸಕ್ಕರೆಯ ಚಿಕ್ಕ ಹರಳಲ್ಲು ಸಿಹಿ ಇಹುದು ಮಂಕುದಿಣ್ಣೆ

ಒಳಗೊಂದು ಹೊರಗೊಂದು ಬಹಳ ಜನ ಇರುವರು
ಗುಳ್ಳೆನರಿಗಳು ಅವರು ಮಾಡುವರು ಮುಖಸ್ತುತಿಯ
ಹಳ್ಳಕ್ಕೆ ಬೀಳಿಸುವ ಇಂಥವರ ನಂಬದಿರು ಮಂಕುದಿಣ್ಣೆ

**– ಜಿ.ಎನ್. ಚಂದ್ರಶೇಖರ ಹೇರ್ಳೆ**

# ಆನಂದ ಬಳಗ (ರಿ.), ಬೆಂಗಳೂರು

22ಎ, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560 001

ಆತ್ಮೀಯರೇ,

ನಮ್ಮ ಬಳಗದ

## 31ನೇ ವಾರ್ಷಿಕೋತ್ಸವ

ದಿನಾಂಕ 24–2–2019ರ ಭಾನುವಾರ ಸಂಜೆ 4.25ರಿಂದ ಬೆಂಗಳೂರು ರಾಜಾರಾಂ ಮೋಹನ್ ರಾಯ್ ರಸ್ತೆಯಲ್ಲಿರುವ ಹೋಟೆಲ್ ಉಡ್‌ಲ್ಯಾಂಡ್ಸ್‌ನ ಶ್ರೀ ಕೃಷ್ಣ ಸಭಾಂಗಣದಲ್ಲಿ ನಡೆಯಲಿದೆ.

**ಶ್ರೀ ಉದಯ ಹೊಳ್ಳ**

ಖ್ಯಾತ ನ್ಯಾಯವಾದಿ ಹಾಗೂ ಅಡ್ವೊಕೇಟ್ ಜನರಲ್, ಕರ್ನಾಟಕ ಸರ್ಕಾರ

ಇವರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಈ ಸಮಾರಂಭದಲ್ಲಿ

**ಡಾ. ಹರೀಶ್ ಹಂದೆ**
ಮ್ಯಾಗ್ಸೆಸೆ ಪ್ರಶಸ್ತಿ ಪುರಸ್ಕೃತರು ಹಾಗೂ
ಸಹ ಸಂಸ್ಥಾಪಕರು, ಸೆಲ್ಕೊ ಸೋಲಾರ್ ಲೈಟ್ ಪ್ರೈ. ಲಿ.

ಮತ್ತು

**ಡಾ. ಲಕ್ಷ್ಮಿ ಜಿ. ಪ್ರಸಾದ್**
ಪ್ರಾಧ್ಯಾಪಕಿ ಹಾಗೂ
ಖ್ಯಾತ ತುಳು ಭಾಷಾ ಸಂಶೋಧಕರು

ಇವರನ್ನು **"ಆನಂದ ಸಮಾಜ ಭೂಷಣ"** ಪ್ರಶಸ್ತಿ ನೀಡಿ ಸನ್ಮಾನಿಸಲಾಗುವುದು.

ತಾವೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಸಮಾರಂಭದ ಸಂಭ್ರಮದಲ್ಲಿ ಪಾಲ್ಗೊಳ್ಳಬೇಕಾಗಿ ವಿನಂತಿ

---

**ಶ್ರೀಮತಿ ಗೀತಾ ವಾಸುದೇವರಾವ್**
ಅಧ್ಯಕ್ಷರು

**ಶ್ರೀ ಎಸ್. ಹರಿದಾಸ ಉಪಾಧ್ಯ**
ಕಾರ್ಯದರ್ಶಿ

**ಶ್ರೀಮತಿ ರತ್ನಕಲಾ ಮಡಿ**
ಅಧ್ಯಕ್ಷರು, ಮಹಿಳಾ ವಿಭಾಗ

---

## ಕಾರ್ಯಕ್ರಮ

ಸಂಜೆ 4.00 : ಲಘು ಉಪಾಹಾರ

ಸಂಜೆ 4.25 : ಸಾಂಸ್ಕೃತಿಕ ಕಾರ್ಯಕ್ರಮ ಶೈಲೂಷಮ್ ಆರ್ಟ್ಸ್ ಮತ್ತು ಕ್ರಿಯೇಷನ್ ತಂಡದವರಿಂದ ಲೈವ್ ಮ್ಯೂಸಿಕ್‌ನೊಂದಿಗೆ "ನೃತ್ಯ ಸಂಭ್ರಮ" (ನಿರ್ದೇಶನ: ವಿದ್ವಾನ್ ಅನಂತ ವಿಕ್ರಮ್)

---

ಸಂಜೆ 6.00 : ಸಭಾ ಕಾರ್ಯಕ್ರಮ

ಪ್ರಾರ್ಥನೆ, ಸ್ವಾಗತ ಭಾಷಣ, ವಾರ್ಷಿಕ ವರದಿ ವಾಚನ, ಸನ್ಮಾನ ಮತ್ತು ಸನ್ಮಾನಿತರ ಅನಿಸಿಕೆ, ಮುಖ್ಯ ಅತಿಥಿಗಳ ಮಾತು, ಅಧ್ಯಕ್ಷರ ಭಾಷಣ, ವಂದನಾರ್ಪಣೆ

---

ರಾತ್ರಿ 8.00 ಗಂಟೆಗೆ : ಭೋಜನ

(ಸೌಜನ್ಯ : ಶ್ರೀ ಕೆ. ವಾಸುದೇವರಾವ್ ಮತ್ತು ಶ್ರೀಮತಿ ಗೀತಾ ವಾಸುದೇವರಾವ್ ಮಾಲಿಕರು, ಹೋಟೆಲ್ ಉಡ್‌ಲ್ಯಾಂಡ್ಸ್)

ಹಾರ್ದಿಕ ಶುಭಾಶಯಗಳೊಂದಿಗೆ

ಹೋಟೆಲ್ ಅಜಂತಾ ಆತಿಥ್ಯಸೇವಾ ಸಮೂಹ

**HOTEL AJANTHA GROUP OF HOSPITALITY SERVICES**

# HOTEL AJANTHA

***A Boarding and Lodging Hotel of repute with spacious place for parking***
***Party Halls and All facilities***

No. 22/A, Mahatma Gandhi Road, Bangalore-560 001
Phone : 25584321 Fax : 080-25584780
Email : bagilthaya@vsnl.com

## AJANTHA TRINITY INN

***Luxurious Rooms for***
***Comfortable Stay***

Trinity Circle, Mahatma Gandhi Road
Bangalore-560 001

Phone : 25559491 - 5 lines

**YOUR SATISFACTION - OUR MOTTO**

ನಿಮ್ಮ ಸಂತೃಪ್ತಿಯೇ ನಮ್ಮ ಧ್ಯೇಯ

# ದಕ್ಷಿಣ ಬೆಂಗಳೂರಿನ
# ಅತಿ ದೊಡ್ಡ ವಿರಾಮ ತಾಣ
# ಈಗ ನಿಮಗಾಗಿ ತೆರೆದಿದೆ

ರಾಯಲ್ ಮೀನಾಕ್ಷಿ ಮಾಲ್

Come Enjoy Maadi




## ರಾಯಲ್ ಮೀನಾಕ್ಷಿ ಮಾಲ್ ದಕ್ಷಿಣ ಬೆಂಗಳೂರಿನ ಅತಿ ದೊಡ್ಡ ಅತ್ಯುತ್ತಮವಾದ ಏಕೀಕ್ರತ, ಶಾಪಿಂಗ್ ಹಾಗೂ ಮನರಂಜನೆ ಕೇಂದ್ರ

- 4.3 ಲಕ್ಷ ಚ.ಅಡಿ ವಿಸ್ತೀರ್ಣದೊಂದಿಗೆ 850 ಕಾರುಗಳನ್ನು ನಿಲ್ಲಿಸಲು ಸ್ಥಳ
- ದಕ್ಷಿಣ ಬೆಂಗಳೂರಿನ ಐಟಿ ವಲಯಕ್ಕೆ ಬಹಳ ಸಮೀಪದಲ್ಲಿದೆ
- ಜೆ.ಪಿ.ನಗರ, ಬಿ.ಟಿ.ಎಂ. ಲೆಔಟ್, ಜಯನಗರ, ಬನಶಂಕರಿ ಮುಂತಾದ ನಿವಾಸಗಳಿರುವ ಬಡಾವಣೆಗಳಿಗೆ ಸಮೀಪದಲ್ಲಿದೆ.
- ಉದ್ದೇಶಿಸಲಾದ ಮೋನೋ ರೈಲ್ ನಿಲ್ದಾಣಕ್ಕೆ ಸಮೀಪದಲ್ಲಿದೆ
- ಸೌಕರ್ಯಗಳು ಅಂತರರಾಷ್ಟ್ರೀಯ ಗುಣಮಟ್ಟದಾಗಿರುತ್ತವೆ

The brand mix includes: Cinepolis | Big Bazaar | Max | Croma | Reliance Trends | Amoeba | Aharam- The Food Court | KFC | McDonald's | TGIF | Louis Philippe | Allen Solly | Bata | Woodlands | Levi's | Lenskart | Burger King | VIP Luggage | Kurlon | Chai Point | FabIndia | Heath & Glow | Taco Bell | Van Heusen | Shoppers Stop | Pantaloons Women & other leading national & international brands / retail outlets

Cinépolis | BIG BAZAAR | aharam The Food Court Choose from over 11 cuisines. | max | Sapna | SHOPPERS STOP | croma

**Vishala India Commercial Developers Pvt Ltd**

Royal Meenakshi Mall, 4th Floor, Bannerghatta Road, Bangalore - 560076. Phone No - 080 – 67080100

# FRIDGE HOUSE

Distributor & Dealer for

**HAVELLS Brand (Lloyd) AC's &**
**CARRIER MIDEA Air Conditioners**



Tower AC



Split AC



Cassette AC



Window AC



Ductable AC

Contact Persons: Mr. M K Prasad & Mr. B Krishnaswamy – M: 9845330571

FRIDGE HOUSE DELIVERING TRUST

# FRIDGE HOUSE

EMERSON Climate Technologies AUTHORIZED FULL-LINE WHOLESALER

## Wholesaler & Importers,

M/s. Emerson Commercial & Residential Solutions
Dealers: M/s. Kirloskar Pneumatic Co. Ltd.
M/s. Gujarat Fluorochemicals Ltd.

Kirloskar Enriching Lives

GFL

## EQUIPMENTS & COMPONENTS. for

**HVAC & R,* COLD ROOMS,* RIPENING CHAMBERS,* HEAT PUMPS.**

Adithya Tower # 23, V.S.N Road, Shivaji Nagar, Bengaluru – 560 051.
Ph. No: 080-22861936, 22860260, 41513104, 41513105 & 41238022
**Email ID :** info@fridgehouse.net; **Web Site:** www.fridgehouse.net

Contact Persons: M.K. Prasad & Mr. Nagesh D Prabhu – M: 9845217197

*With Best Compliments from :*

# HOTEL DWARAKA

Anand Rao Circle
BANGALORE-560 009

**N.R. Narayana Rao**
**Managing Partner**




## ವಸತಿ ಗೃಹ

ನಮ್ಮ ವಿಶೇಷತೆಗಳು
ಸಕಲ ಸೌಲಭ್ಯಗಳನ್ನೊಳಗೊಂಡ, ಉತ್ತಮ ಗಾಳಿ, ಬೆಳಕಿರುವ,
ನಿರಂತರ ನೀರು ವಿದ್ಯುತ್ ಸರಬರಾಜಿರುವ, ಅತಿ ಹೆಚ್ಚಿಲ್ಲದ ಬಾಡಿಗೆಯಿರುವ,
ವಿಶಾಲವಾದ ಕೊಠಡಿಗಳು, ಮನಸ್ಸಿಗೆ ಶಾಂತಿ ನೆಮ್ಮದಿ ತರುವ ಶಾಂತ ವಾತಾವರಣ,
ನಮ್ರತೆಯ ಸೇವೆ, ಎಸ್.ಟಿ.ಡಿ./ಐ.ಎಸ್.ಡಿ. ಮತ್ತು
ಕಾರು ನಿಲ್ಲಿಸಲು ಅನುಕೂಲತೆ ಇತ್ಯಾದಿ...

**ದೂರವಾಣಿ : 22265011 (8 ಮಾರ್ಗಗಳು), 22268263, 22268264**

*With Best Compliments from :*

# P.C. RAO

## RAO IDEAL SERVICES PRIVATE LIMITED

*Specialists in*

Staff Outsourcing and Facility Management

No. 63, 5th Cross, Vasanth Nagar,
Bangalore - 560 052
Mobile : 98444 94630
e-mail : raoideal@yahoo.co.in



# ENGINEERING CONSULTANCY SERVICES FOR CONSTRUCTIONS

## CRUTHI Consultants Consortium Pvt. Ltd.

**Services Offered :**

**In**

- Structural Engineering
- Civil Consultancy
- Project Management
- Water & Sewerage, Fire etc.,
- Electrical & Security
- HVAC & Networking

**For**

- I T Industry
- Factories
- Institutions
- Hotels and Resorts
- Commercial
- Residential

No. 204, 2ND MAIN ROAD, 4TH BLOCK,
RAJAJINAGAR, BANGALORE – 560 010
TEL: +91 80 23 15 20 14, +91 99 45 66 63 06
FAX: +91 80 41 28 22 07
EMAIL: info@cruthi.com, WEBSITE: www.cruthi.in

CONTACT:
MR. DINESH RAO MUNDRUPPADY MOB: 99456 88955
MR. VASUDEVAN T S MOB: 98450 26743
MR. VIJAY KUMAR KULKARNI MOB: 99456 96649

*With Best Compliments from :*

# ಹೋಟೆಲ್ ಶೀತಲ್

**ಆನಂದರಾವ್ ವೃತ್ತ, ಬೆಂಗಳೂರು – 560 009**

## HOTEL Sheethal

#32/12, Sheshadri Road,
Ananda Rao Circle,
Bangalore - 560 009
Ph : 41139560 - 64
Mobile : 98457 77381



## Sheethal Residency

# 3/1, Old Sawar Lane, Sheshadri Road
Near Sangolli Rayanna Circle,
Bangalore - 560 009
Ph : 080 2234 3777 / 80 / 81
email : info@sheetalresidency.com
URL : www.sheetalresidency.com

**ಎ. ಪ್ರಭಾಕರ ರಾವ್** ಮ್ಯಾನೇಜಿಂಗ್ ಪಾರ್ಟ್‌ನರ್

---

ಶುಭಾಶಯಗಳನ್ನು ಕೋರುವವರು



॥ ಹರಿಃ ಓಂ ॥

# ಉಪಾಧ್ಯ ಮತ್ತು ಕಂಪನಿ

(ಆಯುರ್ವೇದ ಔಷಧಗಳ ಸಗಟು ಮಾರಾಟಗಾರರು)



**ಸಿದ್ಧಯ್ಯ ರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು – 27, ದೂರವಾಣಿ : 22235533, 22241121**

## ಉಪಾಧ್ಯ ಆಯುರ್ವೇದ ಭಂಡಾರ

ಮತ್ತಿಕೆರೆ : 15/33, ಮೊದಲನೆಯ ಮುಖ್ಯರಸ್ತೆ
ಬೆಂಗಳೂರು – 560 054
ದೂರವಾಣಿ : 23372422

ಜಯನಗರ : 1333, 26ನೇ ಮುಖ್ಯರಸ್ತೆ,
4ನೇ 'ಟಿ' ಬ್ಲಾಕ್, ಬೆಂಗಳೂರು – 41
ದೂರವಾಣಿ : 26639321

ಶ್ರೀರಾಂಪುರ: 389, ಮಹಾಕವಿ ಕುವೆಂಪು ರಸ್ತೆ,
ನಾಗಪ್ಪ ಬ್ಲಾಕ್, ಬೆಂಗಳೂರು – 21

**ನಮ್ಮ ಎಲ್ಲಾ ಸಂಸ್ಥೆಗಳಲ್ಲಿ ತಜ್ಞ ವೈದ್ಯರುಗಳಿಂದ ಚಿಕಿತ್ಸಾ ಸೌಲಭ್ಯ ದೊರೆಯುತ್ತದೆ.**
**ಸಮಯ ಬೆಳಿಗ್ಗೆ 11.00 ರಿಂದ 3.00 ಮತ್ತು ಸಂಜೆ 7.00 ರಿಂದ 8.30 ರವರೆಗೆ**
**(ಆನಂದ ಬಳಗದ ಸದಸ್ಯರಿಗೆ ರಿಯಾಯಿತಿ ದರದಲ್ಲಿ ಸೇವೆ ಲಭ್ಯ)**



ನನ್ನ ಬ್ಯಾಂಕ್ ಖಾತೆ ನನಗೆ ಬೇಕಾದಂತೆ
ಕೆಬಿಎಲ್
ವನಿತಾ
ಮಹಿಳೆಯರಿಗಾಗಿ ಉಳಿತಾಯ ಖಾತೆ
ಕೆಬಿಎಲ್ ವನಿತಾ ಹೊಸ ಉಳಿತಾಯ ಖಾತಾ ಸೌಲಭ್ಯವನ್ನು ವಿಶೇಷವಾಗಿ ಮಹಿಳೆಯರಿಗಾಗಿಯೇ ಪ್ರಸ್ತುತ ಪಡಿಸಲು ಹೆಮ್ಮೆಪಡುತ್ತಿದ್ದೇವೆ. ಹಲವಾರು ಸೌಲಭ್ಯಗಳನ್ನು ಹೊಂದಿರುವ ಇದು ಎಲ್ಲಿ, ಯಾವಾಗಲಾದರೂ ಬ್ಯಾಂಕಿಂಗ್ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳಲು ನೆರವಾಗುತ್ತದೆ.
ವಿಶೇಷ ಸೌಲಭ್ಯಗಳು *
• ಕನಿಷ್ಠ ಉಳಿಕೆ ಇರಬೇಕೆಂದಿಲ್ಲ
• ಉಚಿತ ಮನಿಪ್ಲಾಂಟ್-ಅಂತಾರಾಷ್ಟ್ರೀಯ ವೀಸಾ ಡೆಬಿಟ್ ಕಾರ್ಡ್
• ಉಚಿತ ಇಂಟರ್‌ನೆಟ್ ಬ್ಯಾಂಕಿಂಗ್ ಸೌಲಭ್ಯ
• ಉಚಿತ ಎಸ್‌ಎಂಎಸ್
• ಬಹುಶಾಖಾ ಸೌಲಭ್ಯ
• ಉಚಿತವಾಗಿ ಹಣ ವರ್ಗಾವಣೆ
ಉಚಿತ
₹50,000* ವರೆಗೆ ಚಿನ್ನಾಭರಣಗಳ ಮೇಲೆ ವಿಮೆ
ಸರಳ ಬ್ಯಾಂಕಿಂಗ್‌ಗಾಗಿ ಕೆಬಿಎಲ್ ವನಿತಾ ಉಳಿತಾಯ ಖಾತೆ ಇಂದೇ ತೆರೆಯಿರಿ.
ಹೆಚ್ಚಿನ ಮಾಹಿತಿಗಾಗಿ ನಿಮ್ಮ ಸಮೀಪದ ಶಾಖೆಯನ್ನು ಸಂಪರ್ಕಿಸಿ
ಕರ್ಣಾಟಕ ಬ್ಯಾಂಕ್ ಲಿ.
ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002
ಇಮೇಲ್: info@ktkbank.com ವೆಬ್‌ಸೈಟ್: www.karnatakabank.com

**ಆರೋಗ್ಯ ಕಾಳಜಿ : 8**



# ಆರೋಗ್ಯಕರ ಆಹಾರ

ಆರೋಗ್ಯಕರ ಆಹಾರವೆಂದರೆ ಸರಿಯಾದ ಪ್ರಮಾಣದಲ್ಲಿ ನಿಯಮಿತವಾಗಿ ಸೇವಿಸುವ ಸಮತೋಲನ ಆಹಾರ. ಈ ಆರೋಗ್ಯಕರ ಆಹಾರ ಸೇವನೆಯಿಂದ ತುಂಬಾ ಭಯಂಕರ ಖಾಯಿಲೆಗಳನ್ನು ತಡೆಗಟ್ಟಲು ಹಾಗೂ ಈಗಾಗಲೇ ಇರುವ ಖಾಯಿಲೆಗಳ ದುಷ್ಪರಿಣಾಮಗಳು ಕಡಿಮೆಯಾಗುವಂತೆ ಮಾಡಲು ಸಹಕಾರಿಯಾಗಿದೆ. ತಡೆಗಟ್ಟಬಹುದಾದ ಖಾಯಿಲೆಗಳೆಂದರೆ – ಹೃದಯಾಘಾತ, ಅಧಿಕ ರಕ್ತ ಒತ್ತಡ, ಮಧುಮೇಹ, ಅರ್ಬುದ (ಕ್ಯಾನ್ಸರ್), ಪಿತ್ತಕೋಶದ ಕಲ್ಲು, ಅಸಿಡಿಟಿ, ಪದೇ ಪದೇ ತಗಲುವ ಸೋಂಕುರೋಗ. ಆರೋಗ್ಯಕರ ಆಹಾರ ಸೇವನೆಯಿಂದ ತೂಕ ಕಡಿಮೆಯಾಗುತ್ತದೆ. ಸಕ್ಕರೆ ಅಂಶ ಜಾಸ್ತಿ ಆಗುವುದಿಲ್ಲ, ಕೊಲೆಸ್ಟ್ರಾಲ್, ಟ್ರೈಗಿಸರೈಡ್ ಕಡಿಮೆಯಾಗುತ್ತದೆ. ಬಿ.ಪಿ. ಕಡಿಮೆಯಾಗುತ್ತದೆ. ಜೀರ್ಣಶಕ್ತಿಯಾಗಿ ಮಲಬದ್ಧತೆ ಗುಣವಾಗುತ್ತದೆ. ರೋಗನಿರೋಧಕ ಶಕ್ತಿ ಜಾಸ್ತಿಯಾಗಿ ಸೋಂಕು ತಗಲುವುದು ಕಡಿಮೆಯಾಗುತ್ತದೆ. ಮನಸ್ಸು ಏರುಪೇರು ಆಗದೆ ಒಂದು ಸಮಾಧಾನಕರವಾಗಿರುತ್ತದೆ. ವ್ಯಾಯಾಮ ಮಾಡಲು ಉತ್ತೇಜನ ಬರುತ್ತದೆ.

ಸರಿಯಾದ ತೂಕ ಕಾಯ್ದುಕೊಳ್ಳಲು ಸರಿಯಾದ ಪ್ರಮಾಣದಲ್ಲಿ ಆಹಾರ ಪದಾರ್ಥಗಳನ್ನು ಸೇವಿಸಬೇಕು. ಒಬ್ಬ ಸಾಧಾರಣ ಕೆಲಸ ಮಾಡುವ ವ್ಯಕ್ತಿಗೆ ಒಂದು ದಿವಸಕ್ಕೆ ಒಟ್ಟಾರೆ 25 ಕ್ಯಾಲೋರಿ ಪ್ರತಿ ಒಂದು ಕಿ.ಗ್ರಾಂ. ನಂತೆ ಬೇಕಾಗುತ್ತದೆ. ಈ ಒಟ್ಟಾರೆ ಕ್ಯಾಲೋರಿಯಲ್ಲಿ ಶೇ.55% ಕಾರ್ಬೊಹೈಡ್ರೇಟ್, 20% ಪ್ರೋಟೀನ್ ಹಾಗೂ 25% ಮೇಧಸ್ಸು ಸೇರಿಸಬೇಕು. ಇವೆಲ್ಲದರ ಜೊತೆಗೆ ತರಕಾರಿ, ಹಣ್ಣು, ಹಾಲು ಸೇವಿಸಬೇಕು. ಕೆಲಸ ಜಾಸ್ತಿ ಮಾಡದೆ ಜಾಸ್ತಿ ಕ್ಯಾಲೊರಿ ಸೇವಿಸಿದರೆ ಆಹಾರ ದೇಹದಲ್ಲಿ ಕೊಬ್ಬು ಆಗಿ ಶೇಖರಣೆಯಾಗುತ್ತದೆ.

ಸರಿಯಾದ ವ್ಯಾಯಾಮ ಮಾಡಿ ಆಹಾರ ಸೇವನೆ ಮಾಡಿದರೆ ಮಾಂಸ ಖಂಡಗಳಿಗೆ. ಮೂಳೆಗಳಿಗೆ ಶಕ್ತಿ ಬರುತ್ತದೆ. ಆರೋಗ್ಯಕರ ಆಹಾರವೆಂದರೆ ಜಿಡ್ಡು ಕಡಿಮೆ ಇರುವ, ಪ್ರೋಟೀನ್, ನಾರು ಜಾಸ್ತಿ ಇರುವ ಆಹಾರ, ಪ್ರೋಟೀನ್ ಮಾಂಸಖಂಡಗಳ ಬೆಳವಣಿಗೆ, ಕಾರ್ಯಸಿದ್ಧಿಗೆ, ರೋಗ ನಿರೋಧಕ ಶಕ್ತಿ ವೃದ್ಧಿಸಲು ಸಹಾಯ ಮಾಡುತ್ತದೆ. ಹಾಗೆಯೇ ಪ್ರೋಟೀನ್ ಹಸಿವು ಕಡಿಮೆ ಮಾಡುತ್ತದೆ. ನಾರು ಹೊಟ್ಟೆ ತುಂಬುವುದಲ್ಲದೆ, ಕೊಲೆಸ್ಟ್ರಾಲ್ ಹಾಗೂ ಸಕ್ಕರೆ ರಕ್ತಕ್ಕೆ ಸೇರುವುದನ್ನು ಕಡಿಮೆ ಮಾಡುತ್ತದೆ. ನಾರು ಪದಾರ್ಥ ದೇಹದಲ್ಲಿನ ಕಲ್ಮಷಗಳನ್ನು ತೆಗೆಯಲು, ಮಲಬದ್ಧತೆ ನಿವಾರಿಸಲು ಸಹಾಯಕಾರಿಯಾಗಿದೆ. ಆದಷ್ಟು ಎಣ್ಣೆ ಜಾಸ್ತಿ ಹಾಕಿರುವ, ಎಣ್ಣೆಯಲ್ಲಿ ಕರಿದ ಪದಾರ್ಥಗಳನ್ನು ಸಿಹಿ ಅಥವಾ ಖಾರಾ, ಪೂರ್ತಿಯಾಗಿ ತಿನ್ನುವುದನ್ನು ನಿಲ್ಲಿಸಬೇಕು. ಒಂದು ದಿವಸಕ್ಕೆ ಕಣ್ಣಿಗೆ ಕಾಣುವಂತೆ 3 ಚಮಚ ಮಾತ್ರ ಎಣ್ಣೆ ಉಪಯೋಗಿಸಬೇಕು. ಈ ಎಣ್ಣೆಗಳಲ್ಲಿ ಆದಷ್ಟು ಮನೊಸ್ಯಾಚುರೇಟೆಡ್ ಎಣ್ಣೆಗಳಾದ ಕಡಲೆಬೀಜದ ಎಣ್ಣೆ, ಪಾಮ್ ಎಣ್ಣೆ, ಆಲಿವ್ ಎಣ್ಣೆ, ಸಾಸುವೆ ಎಣ್ಣೆ, ರೈಸ್‌ಬ್ರಾನ್ ಎಣ್ಣೆ ಉಪಯೋಗಿಸಬೇಕು. ಸೂರ್ಯಕಾಂತಿ ಬೀಜದ ಎಣ್ಣೆ, ಸೋಯಾ ಬೀಜದ ಎಣ್ಣೆ, ಕಾರ್ನ್ ಎಣ್ಣೆ ಕಡಿಮೆ ಉಪಯೋಗಿಸಬೇಕು. ಬೆಣ್ಣೆ, ತುಪ್ಪ ಉಪಯೋಗಿಸಬಾರದು. ಕೊಬ್ಬರಿಎಣ್ಣೆ ಸ್ವಲ್ಪ ಉಪಯೋಗಿಸಬಹುದು. ಇದರ ಸೇವನೆಯಿಂದ ಕೊಲೆಸ್ಟ್ರಾಲ್ ಜಾಸ್ತಿಯಾಗುವುದಿಲ್ಲ. ಹಾಗೆಯೇ ಉಪ್ಪು ಜಾಸ್ತಿ ಉಪಯೋಗಿಸಬಾರದು.

ಉಪ್ಪು ಜಾಸ್ತಿಯಿರುವ ಪದಾರ್ಥಗಳೆಂದರೆ ಉಪ್ಪಿನಕಾಯಿ, ಕಾಂಡಿಮೆಂಟ್ ತಿಂಡಿಗಳು, ಖಾರದ ಕಡಲೆಬೀಜ, ಡಬ್ಬದಲ್ಲಿ ಬರುವ ತರಕಾರಿ, ಚಟ್ನಿಪುಡಿ, ಹಪ್ಪಳ, ಸಂಡಿಗೆ, ಕೆಚ್‌ಅಪ್ ಇತ್ಯಾದಿ. ತರಕಾರಿ ಆದಷ್ಟು ಜಾಸ್ತಿ ಉಪಯೋಗಿಸಬೇಕು. ದಿವಸಕ್ಕೆ 4–5 ಬಾರಿ ಉಪಯೋಗಿಸಿದರೂ ಒಳ್ಳೆಯದು. ತರಕಾರಿಗಳಲ್ಲಿ ಆಲೂಗಡ್ಡೆ, ಗೆಣಸು, ಸುವರ್ಣಗೆಡ್ಡೆ, ಸಿಹಿಕುಂಬಳ ಜಾಸ್ತಿ ಉಪಯೋಗಿಸಬಾರದು. ಸಿಪ್ಪೆ ಸಮೇತ ತಿನ್ನಬಹುದಾದ ಹಣ್ಣುಗಳನ್ನು ಸೇವಿಸುವುದುವ ಒಳ್ಳೆಯದು. ಸೇಬು, ಸೀಬೆ, ಸಪೋಟ, ದ್ರಾಕ್ಷಿ, ಮಾವಿನಹಣ್ಣು, ಪಪ್ಪಾಯಿ ಕೆಲವೊಂದು ಹಣ್ಣುಗಳ ಸಿಪ್ಪೆಗಳನ್ನು ಒಣಗಿಸಿ ಪುಡಿ



ಮಾಡಿ ಆಹಾರದ ಜೊತೆ ಸೇವಿಸುವುದು ಒಳ್ಳೆಯದು. ನಾರು ಜಾಸ್ತಿ ಉಪಯೋಗಿಸುವುದರಿಂದ ದೊಡ್ಡ ಕರುಳಿನ ಕ್ಯಾನ್ಸರ್ ಬರುವುದು ಕಡಿಮೆಯಾಗುತ್ತದೆ. ಹಸಿ ಅಥವಾ ಹುರಿದ ಕಡಲೆಬೀಜ ದಿವಸಾ (30 ಗ್ರಾಂ) ತಿನ್ನುವುದು ಒಳ್ಳೆಯದು. ಇದರಲ್ಲಿ ಪ್ರೋಟೀನ್, ಒಳ್ಳೆ ಎಣ್ಣೆ, ಬಿ.ವಿಟಮಿನ್‌ಗಳು, ನಾರು ಜಾಸ್ತಿ ಇದೆ. ಹಾಗೆಯೇ ದಿವಸ 4–5 ಬಾದಾಮಿ, ಖರ್ಜೂರ, ಫಿಗ್, ವಾಲ್‌ನಟ್, ಗೋಡಂಬಿ ತಿನ್ನುವುದು ಒಳ್ಳೆಯದು. ಇವುಗಳಲ್ಲಿ ನಾರಿನ ಜೊತೆಗೆ ಖನಿಜಗಳ ವಿಟಮಿನ್‌ಗಳು ಜಾಸ್ತಿ ಇದ್ದು, ರೋಗನಿರೋಧಕ ಶಕ್ತಿ ಉಂಟಾಗುತ್ತದೆ.

ಆಲ್ಕೋಹಾಲ್ ಸೇವನೆ ಸಂಪೂರ್ಣವಾಗಿ ಬಿಡಬೇಕು. ಸಿಗರೇಟ್ ಸೇವನೆ ನಿಲ್ಲಿಸಬೇಕು. ಕೆನೆ ತೆಗೆದ ಹಾಲು, ಮೊಸರು ದಿವಸ ಉಪಯೋಗಿಸಬಹುದು. ಇವುಗಳಲ್ಲಿ ಪ್ರೋಟೀನ್, ವಿಟಮಿನ್, ಕ್ಯಾಲ್ಸಿಯಂ ಇದೆ. ಮೊಟ್ಟೆ ತಿನ್ನುವವರು ಮೊಟ್ಟೆಯಲ್ಲಿನ ಹಳದಿ ಭಾಗ ಉಪಯೋಗಿಸಬಾರದು. ಮಾಂಸ ತಿನ್ನುವವರು ಆದಷ್ಟು ಕೋಳಿ ಹಾಗೂ ಮೀನಿನ ಮಾಂಸ ವಾರಕ್ಕೆ ಒಮ್ಮೆ ಸೇವಿಸಬಹುದು. ಒಂದೇ ಬಾರಿ ಜಾಸ್ತಿ ಆಹಾರ ಸೇವಿಸುವ ಬದಲು 3 ಗಂಟೆಗೊಮ್ಮೆ ಸ್ವಲ್ಪ ತಿನ್ನುವುದು ಒಳ್ಳೆಯದು. ಪ್ರತಿಯೊಂದು ಬಾರಿಯೂ ಪ್ರೋಟೀನ್ ಮತ್ತು ತರಕಾರಿ ಜಾಸ್ತಿ ಸೇರಿಸಿ ತಿನ್ನಿರಿ. ನೀರು ಒಂದು ದಿವಸಕ್ಕೆ 7 ಲೋಟ – 1 ಲೀಟರ್ ಕುಡಿಯಲೇ ಬೇಕು. ಜಾಸ್ತಿ ಬೆವರಿದರೆ, ವ್ಯಾಯಾಮ ಮಾಡಿದರೆ, ಜಾಸ್ತಿ 1.5ಲೀ. – 2 ಲೀ. ನೀರು ಕುಡಿಯಬೇಕು. ಅಂಗಡಿಗಳಲ್ಲಿ ಸಿಗುವ ಕೊಕೊಕೋಲ, ಫಾಂಟಾ, ಡಯಟ್ ಸೋಡಾ ಮುಂತಾದ ಬಾಟಲು ರಸಗಳನ್ನು ಸೇವಿಸಬಾರದು. ಗೋಭಿಮಂಚೂರಿ, ಸಮೋಸ, ಮಸಾಲೆಪುರಿ, ಪಿಜ್ಜಾ, ಬರ್ಗರ್ ಮುಂತಾದ ತಿನಿಸುಗಳನ್ನು ಆಗಾಗ್ಗೆ ತಿನ್ನಬಾರದು.

**ಡಾ. ನಾಗೇಂದ್ರ ಹೆಬ್ಬಾರ್**

***

# ನವಗ್ರಹ ವಿಚಾರ

| ಕ್ರ. ಸಂ. | ಗ್ರಹಗಳು | ಸಂಖ್ಯೆ | ಗೋತ್ರ | ಗ್ರಹ ಮಂಡಲದಲ್ಲಿ ಸ್ಥಾನ | ಧಾನ್ಯ | ವರ್ಣ/ ವಸ್ತ್ರ | ರತ್ನ | ಪತ್ನಿಯರು | ಅಭಿಮಾನ ದೇವತೆ |
|---|---|---|---|---|---|---|---|---|---|
| 1 | ಆದಿತ್ಯ (ಸೂರ್ಯ | 1 | ಕಶ್ಯಪ | ಮಧ್ಯ | ಗೋಧಿ | ಕೆಂಪು | ಮಾಣಿಕ್ಯ (ಕೆಂಪು) | ಛಾಯಾದೇವಿ | ಶಿವ |
| 2 | ಸೋಮ (ಚಂದ್ರ) | 2 | ಆತ್ರೇಯ | ಆಗ್ನೇಯ | ಅಕ್ಕಿ | ಬಿಳೀ | ಮುತ್ತು | ರೂಪಿಣಿ | ದುರ್ಗಾ |
| 3 | ಮಂಗಳ (ಅಂಗಾರಕ) ಕುಜ | 9 | ಭಾರದ್ವಾಜ | ದಕ್ಷಿಣ | ತೊಗರಿ | ಅರೆಕೆಂಪು | ಹವಳ | ಶಕ್ತೀ | ಸುಬ್ರಹ್ಮಣ್ಯ |
| 4 | ಬುಧ | 5 | ಆತ್ರೇಯ | ಈಶಾನ್ಯ | ಹೆಸರು | ಹಸಿರು | ಮರಕತ | ಜ್ಞಾನೀ | ವಿಷ್ಣು |
| 5 | ಗುರು (ಬೃಹಸ್ಪತಿ) | 3 | ಅಂಗೀರಸ | ಉತ್ತರ | ಕಡಲೇ | ಹಳದಿ | ಪುಷ್ಯರಾಗ | ತಾರಾ | ವಿಷ್ಣು/ರುದ್ರ |
| 6 | ಶುಕ್ರ | 6 | ಭಾರ್ಗವ | ಪೂರ್ವ | ಅವರೆ | ಬಿಳಿ ಮತ್ತು ಹಸಿರು ಮಿಶ್ರ | ವಜ್ರ | ಸುಕೀರ್ತಿ | ಲಕ್ಷ್ಮೀ |
| 7 | ಶನಿ | 8 | ಕಶ್ಯಪ | ಪಶ್ಚಿಮ | ಕರೀಎಳ್ಳು | ನೀಲಿ | ನೀಲಿ | ಜ್ಯೇಷ್ಠಾ | ತ್ರಿಮೂರ್ತಿಗಳು |
| 8 | ರಾಹು | 4 | ಪ್ಠೇರಿನಸ್ | ನೈಋತ್ಯ | ಉದ್ದು | ಹೊಗೆಬಣ್ಣ | ಗೋಮೇಧಕ | | ನಾಗ |
| 9 | ಕೇತು | 7 | ಜೈಮಿನಿ | ವಾಯವ್ಯ | ಹುರುಳಿ | ನಾನಾವರ್ಣ (ಮಿಶ್ರವರ್ಣ) | ವೈಢೂರ್ಯ | ಚಿತ್ರಲೇಖಾ | ವಿನಾಯಕ |

**ಸಂಗ್ರಹ : ಹೆಚ್. ಸತ್ಯನಾರಾಯಣ ರಾವ್**

# ಅಂಡಮಾನ್‌ನಲ್ಲಿ ಆ ಐದು ದಿನಗಳು... ಪ್ರವಾಸ ಕಥನ

**ಆನಂದ ಬಳಗದ ಮಹಿಳಾ ವಿಭಾಗದ ನೇತೃತ್ವದಲ್ಲಿ ಅಂಡಮಾನ್‌ಗೆ ಪ್ರವಾಸ ಏರ್ಪಡಿಸಿದ್ದು, ಇದರಲ್ಲಿ ಪಾಲ್ಗೊಂಡ ಶ್ರೀಮತಿ ಸುನಿತಾ ತೋಳ್ಪಾಡಿಯವರು ಪ್ರವಾಸದ ವಿವರವನ್ನು ಮತ್ತು ಅನುಭವಗಳನ್ನು ಸವಿಸ್ತಾರವಾಗಿ ಹಂಚಿಕೊಂಡಿದ್ದಾರೆ – ಈ ಕಥನದಲ್ಲಿ . ಸಂ**

ಅಂಡಮಾನ್... ಹೆಸರೇ ನಿಗೂಢ, ಭಯಾನಕ. ಯಾರಾದರು ತಪ್ಪು ಮಾಡಿದರೆ ಅವರನ್ನು ಅಂಡಮಾನ್‌ಗೆ ಕಳುಹಿಸಬೇಕು ಎನ್ನುವ ಪರಿ ಅಥವ ಹೇಳಬಾರದಂಥಹ ಜಾಗಕ್ಕೆ ಹೋದರೆ ಅಂಡಮಾನ್‌ಗೆ ಹೋಗಿದ್ದೆ ಎನ್ನುವ ರೀತಿ ಎಲ್ಲವೂ ನಿಗೂಢ. ಇಂತಹ ಅಂಡಮಾನ್‌ಗೆ ನಾವು ಒಟ್ಟು 39 ಮಂದಿ ಉತ್ಸಾಹದಿಂದ ಹೊರಟೆವು.



ದಿನಾಂಕ 21 ನವೆಂಬರ್, ಚುಮುಚುಮು ಮುಂಜಾನೆ ಆನಂದ ಬಳಗದ ಕೆಲವರಿಗೆ ಆಹ್ಲಾದಕರವಾಗಿತ್ತು. ವಿಮಾನನಿಲ್ದಾಣಕ್ಕೆ ಮೊದಲು ತಲುಪುವ ತವಕ ಕೆಲವರದು, ಸಮಯಕ್ಕೆ ಸರಿಯಾಗಿ ತಲುಪಿದ ಆನಂದ ಹಲವರದು. ಎಲ್ಲರ ಮುಖದಲ್ಲೂ ಮಂದಹಾಸ. ದಿನ ನಿತ್ಯ ಜೀವನದ ಜಂಜಾಟದಿಂದ ತಾತ್ಕಾಲಿಕ ಮುಕ್ತಿ ಹೊಂದಿದ ಆನಂದ. ಎಲ್ಲರೂ ಅವರವರ ಬ್ಯಾಗ್ ಹೊತ್ತು ಮಕ್ಕಳಂತೆ ಓಡಾಡುತ್ತಿದ್ದರು. ಪ್ಲಾಟಿನಮ್ ಕ್ರೆಡಿಟ್ ಕಾರ್ಡ್‌ನವರಿಗೆ ತಿಂಡಿ ಫ್ರೀ ಎನ್ನುವ ಸುದ್ದಿಗೆ ಎಲ್ಲರೂ ತಮ್ಮತಮ್ಮ ಕಾರ್ಡ್ ಹಿಡಿದು ಆಸೆಯಿಂದ ಓಡಾಡಿ ಕೊನೆಗೆ ಕಾರ್ಡ್ ಒಬ್ಬರ ಕೈಯಲ್ಲಿ ಅದರ ಕೋಡ್ ಇನ್ನೊಬ್ಬರ ತಲೆಯಲ್ಲಿ ಎನ್ನುವ ಪೇಚಿಗೆ ಸಿಲುಕಿ ನಿರಾಸೆಗೊಂಡೆವು.

ಸಮಯಕ್ಕೆ ಸರಿಯಾಗಿ ವಿಮಾನದಲ್ಲಿ ಆಸೀನರಾದೆವು. ವಿಮಾನ ನಿಧಾನವಾಗಿ ರಸ್ತೆಯಲ್ಲಿ ಹೋಗುವ ಹಾಗೆ ಹೋಗುತ್ತಿರುವಾಗ, ಎಲ್ಲರೂ ಅಂಡಮಾನ್‌ಗೆ ಹೀಗೆ ಹೋಗುವುದೇ ಎಂದು ಹಾಸ್ಯದ ಹೊನಲಲ್ಲಿ ತೇಲಿದರು. ದೈವ ಸೃಷ್ಟಿಗೆ ಸವಾಲು ಒಡ್ಡಿ ಮೋಡವನ್ನು ಭೇದಿಸಿ ಮನುಜ ಸೃಷ್ಟಿ ಮುನ್ನುಗ್ಗಿ ಸಾಗುತಿತ್ತು. ಸುದೀರ್ಘ 2.30 ಗಂಟೆಗಳ ಸಾಗುವಿಕೆಯಲ್ಲಿ ಸುಮಾರು 1600 ಕಿ.ಮಿ ಕ್ರಮಿಸಿ ನಮ್ಮ ಪುಷ್ಪಕ ವಿಮಾನ ಅಂಡಮಾನ್ ಎಂಬ ಅದ್ಭುತವಾದ ದ್ವೀಪ ಸಮೂಹದ ಪೋರ್ಟ್ ಬ್ಲೇರ್‌ನ "ವೀರ್ ಸಾವರ್‌ಕರ್ ಇಂಟರ್ ನ್ಯಾಷನಲ್ ಏರ್‌ಪೋರ್ಟ್"ನಲ್ಲಿ ನಿಧಾನವಾಗಿ ಇಳಿಯಿತು. ಅಪರಿಮಿತ ಉತ್ಸಾಹದಿಂದ ಎಲ್ಲರೂ ಹೋಟೆಲ್‌ಗೆ ಲಗ್ಗೆಯಿಟ್ಟೆವು. ಅಲ್ಲಿ ರುಚಿಯಾದ ಭೋಜನ ಚಪ್ಪರಿಸಿ ಅಂಡಮಾನ್ ಅನ್ವೇಷಣೆ ಶುರು ಮಾಡಿದೆವು.

ಸಂಜೆ ಹೊತ್ತು ನಾವೆಲ್ಲ ಪೋರ್ಟ್ ಬ್ಲೇರ್‌ನ ಕಾರ್ ಬಿನ್ಸ್ ಕಾವ್ ಬೀಚ್ (Corbyn's Cove Beach) ಹೋದೆವು. ಅದು ತುಂಬಾ ದೊಡ್ಡದಾದ ಬೀಚ್. ದೋಣಿಯಾನದಂತಹ ಆಟಗಳನ್ನು ಹಲವರು ಆಡಿದರೆ ಉಳಿದವರು ಮರಳಲ್ಲಿ ನಡೆಯುತ್ತಾ ಎಳನೀರು ಸವಿಯುತ್ತಿದ್ದರು. ಅಲ್ಲಿ ಸಂಜೆ 5 ಗಂಟೆಗೆ ಕತ್ತಲಾಗುತ್ತಿತ್ತು. ಅಲ್ಪಸ್ವಲ್ಪ ವ್ಯಾಪಾರ ಮಾಡಿ ನಾವು ಅಂಡಮಾನ್‌ನ ಪ್ರಸಿದ್ಧ ಸ್ಥಳ ಸೆಲ್ಯುಲಾರ್ ಜೈಲ್ ಕಡೆ ಹೊರಟೆವು.

ತಂಪಾದ ಹಸಿರು ಬೆಳಕಲ್ಲಿ ಕಂಗೊಳಿಸುವ ಸುಂದರವಾದ ಉದ್ಯಾನವನದಲ್ಲಿ ಬ್ರಿಟಿಷರ ಅದೆಷ್ಟೋ ಕ್ರೂರಕೃತ್ಯಗಳಿಗೆ ಸಾಕ್ಷಿಯಾಗಿ ಅಂಡಮಾನ್‌ನ ಕಾರಾಗೃಹ ಮೂಕಸಾಕ್ಷಿಯಾಗಿ ಮೌನವಾಗಿ ರೋಧಿಸುವಂತಿತ್ತು. ಉದ್ಯಾನವನದಲ್ಲಿ ಸ್ಥಾಪಿಸಿದ್ದ ವೀರ ಸ್ವಾತಂತ್ರ್ಯ ಹೋರಾಟಗಾರರ ಪುತ್ಥಳಿಗಳನ್ನು ನೋಡಿದೆವು. ಅಲ್ಲಿಂದ ಕಾರಾಗೃಹದ ಒಳಗೆ ಅಯೋಜಿಸುವ ಸೌಂಡ್ ಅಂಡ್ ಮ್ಯೂಜಿಕ್ ಕಾರ್ಯಕ್ರಮಕ್ಕೆ ಮೌನವಾಗಿ ಅಸೀನರಾದೆವು. ರಾಷ್ಟ್ರಗೀತೆ ಶುರುವಾದಾಗ ಎಲ್ಲರೂ ಭಕ್ತಿಯಿಂದ ಎದ್ದು ನಿಂತರು. ಜನಗಣ ಮನ... ಎನ್ನುವಾಗ ರೋಮಾಂಚನ ವಾಗುತಿತ್ತು. ಇಲ್ಲಿ ಹೇಳುವ ಭಾವನೆ ತುಂಬಾ ವಿಭಿನ್ನವಾಗಿತ್ತು. ಸ್ವಾತಂತ್ರ್ಯ ಹೋರಾಟಗಾರರ ರೋಧನ ವೇದನೆ ಕಣ್ಣಿಗೆ ಕಟ್ಟಿದಂತಾಯಿತ್ತು. ರಾಷ್ಟ್ರಗೀತೆ ಮುಗಿದಾಗ ಗುಂಪಿನ ಮಧ್ಯೆ ಯುವಕನೊಬ್ಬ "ಭೋಲೋ ಭಾರತ್ ಮಾತಾಕಿ ಜೈ" ಎಂದಾಗ ಎಲ್ಲರೂ ಒಕ್ಕೊರಲಿನಿಂದ ಜೈ ಎಂದರು.

ಸುತ್ತಲೂ ಕತ್ತಲು, ಗಂಭೀರವಾದ ವಾತಾವರಣ ಭಾರವಾದ ಧ್ವನಿಯಿಂದ ಹಿಂದಿ ಭಾಷೆಯಲ್ಲಿ ಅಲ್ಲಿ ಆದ ಸಂಘರ್ಷಗಳ ಬಗ್ಗೆ ಸವಿಸ್ತಾರವಾಗಿ ವಿವರಣೆ ಶುರುವಾಯಿತು. ಆ ವಿವರಣೆ ಒಂದು ಅಶ್ವತ್ಥ ಮರದಿಂದ ಬರುತ್ತಿತ್ತು. ನಾವು ಕಂಡ ಶ್ರೇಷ್ಠ ನಟ ಓಂಪುರಿ ರವರ

ಧ್ವನಿಯಾಗಿತ್ತು ಹಾಗು ಜೀವಂತವಾಗಿತ್ತು. ಮರ ಭೀಷ್ಮನ ಹಾಗೆ ಅಜರಾಮರವಾಗಿತ್ತು. ಹೋರಾಟಗಾರರ ಭೀಬತ್ಸ್ಯ ಹೋರಾಟ ಕಂಡ ಏಕೈಕ ಜೀವಂತ ಸಾಕ್ಷಿಯಾಗಿತ್ತು. ಆ ನೆರಳು ಬೆಳಕಿನ ಆಟ ನಮ್ಮ ಈ ಸುಖ ಜೀವನಕ್ಕೆ ನಾಂದಿಯಾಗಿತ್ತು. ಸುಮಾರು ಒಂದು ಗಂಟೆಗಳ ಕಾಲ ನಾವೆಲ್ಲರೂ ಸ್ತಬ್ಧರಾದೆವು. ಭಾರವಾದ ಮನಸ್ಸಿನಿಂದ ನಾವೆಲ್ಲರೂ ಹೋಟೆಲ್ ಕಡೆ ಮುಖ ಮಾಡಿದೆವು.

ನವೆಂಬರ್ 22, ನಮ್ಮ ಪ್ರವಾಸದ ಎರಡನೇ ದಿನವಾಗಿತ್ತು. ಅಂಡಾಮಾನ್‌ನ ಪ್ರಸಿದ್ಧ ದ್ವೀಪಗಳಾದ ನಾರ್ತ್ ಬೇ ಐಲ್ಯಾಂಡ್ (North Bay Island) ಹಾಗು ರೋಸ್ ಐಲ್ಯಾಂಡ್ (Ross Island) ನೋಡುವ ಕಾತುರದಿಂದ ನಾವೆಲ್ಲರೂ ಸಿದ್ಧರಾದೆವು. ಉಪಹಾರ ಮುಗಿಸಿ, ಅಂದ ಚೆಂದದ ಉಡುಪು, ಟೋಪಿ, ತಂಪು ಕನ್ನಡಕ ಧರಿಸಿ ಎಲ್ಲರೂ ಮಕ್ಕಳಂತೆ ಚಿಲಿಪಿಲಿ ಎನ್ನುತ್ತಿದ್ದರು. ಪೋರ್ಟ್ ಬ್ಲೇರ್ ನಿಂದ ನಾರ್ತ್ ಬೇ ದ್ವೀಪಕ್ಕೆ ನಾವೆಲ್ಲ ಬೇರೆ ಬೇರೆ ಬೋಟ್ ಗಳಲ್ಲಿ ಹೋದೆವು. ಅಲ್ಲಿ ಎಲ್ಲವೂ ಭಾರತ ಸರ್ಕಾರದ ನೌಕಾಪಡೆಯ ಸುಪರ್ದಿಯಲ್ಲಿದ್ದು ಪ್ರವಾಸಿಗರ ರಕ್ಷಣಾ ಜವಾಬ್ದಾರಿಯನ್ನು ಸಮರ್ಪಕವಾಗಿ ನಿಭಾಯಿಸುತ್ತಿತ್ತು. ಅಲ್ಲಿಯ ಬೀಚ್ ಕಲ್ಲುಗಳಿಂದ ತುಂಬಿತ್ತು. ನಡೆಯುವಾಗ ತುಂಬ ಎಚ್ಚರಿಕೆಯಿಂದ ನಡೆಯಬೇಕಾಗಿತ್ತು. ಚಿಕ್ಕದಾಗಿರುವ ಈ ಬೀಚ್, ಸ್ಕೂಬಾಡೈವ್, ಸಬ್ ಮೆರಿನ್, ಸೀ ಬೆಡ್ ವಾಕ್ ಹೀಗೆ ಹಲವಾರು ಸಾಹಸಕ್ಕೆ ಪ್ರಸಿದ್ಧ.

ನಮ್ಮ ಗುಂಪಿನ ಯುವಕರು ಹಾಗು ಉತ್ಸಾಹಿ ಅಪ್ಪ ಅಮ್ಮಂದಿರು ಯೋಧರಂತೆ ಉಡುಪು ಧರಿಸಿ ಸ್ಕೂಬಾಡೈವ್‌ಗೆ ಹೆಮ್ಮೆಯಿಂದ ಹೊರಟರು. ಆ ಸಾಹಸ ಮಾಡಿ ಬಂದ ಅವರ ಮುಖದಲ್ಲಿ ಲೋಕವನ್ನು ಗೆದ್ದ ಭಾವನೆ. ಇನ್ನು ಉಳಿದವರು ಸಬ್ ಮೆರಿನ್ ನಲ್ಲಿ ಹೊರಟೆವು. ಸಮುದ್ರದ ಒಳಗಿನ ಜಗತ್ತು ನೋಡಿ ಅಚ್ಚರಿಗೊಂಡೆವು. ನಕ್ಷತ್ರ ಮೀನು, ಹಾವು, ಆಮೆ, ನೂರಾರು ವಿಭಿನ್ನ ಮೀನುಗಳು ಹೀಗೆ ಹತ್ತಾರು ಜೀವಿಗಳು. ಸ್ಕೂಬಾದವರು ಹತ್ತಿರದಿಂದ ನೋಡಿ ಖುಷಿ ಪಟ್ಟರೆ, ಸಬ್ ಮೆರಿನ್ ನವರು ದೂರದಿಂದ ನೋಡಿ ಆನಂದಿಸಿದರು. ಅಲ್ಲಿಂದ ನಮ್ಮ ಪ್ರಯಾಣ ರೊಸ್ ಐಲ್ಯಾಂಡ್ ಕಡೆಗೆ, ನಾವು ಬಂದ ದೋಣಿಯಲ್ಲೆ ಹೋದೆವು.

ದೂರದಿಂದಲೇ ರೋಸ್ ನಮ್ಮ ಮನಸ್ಸನ್ನು ಸೆಳೆಯುತಿತ್ತು. ಹತ್ತಿರ ಹೋಗಿ ನೋಡಿದಾಗ ಮಂತ್ರಮುಗ್ಧರಾದೆವು. ಕೆಂಪು ಕಲ್ಲುಗಳ ಕಟ್ಟಡಗಳು, ಕಟ್ಟಡವನ್ನೆಲ್ಲಾ ಆವರಿಸಿಕೊಂಡಿರುವ ಬೇರುಗಳು. ಸ್ವಚ್ಛಂದವಾಗಿ ಓಡಾಡುವ ಪ್ರಾಣಿ ಪಕ್ಷಿಗಳು ಯಾವುದೋ ಕನಸ್ಸಿನ ಲೋಕದಂತಿತ್ತು. ರೋಸ್ ಕಥೆ ಹೇಳಲು ಅಲ್ಲಿ ಇದ್ದ ಏಕೈಕ ವ್ಯಕ್ತಿ ಎಂದರೆ ಅನುರಾಧ. ಅನುರಾಧ ರೋಸ್ ಐಲ್ಯಾಂಡಿನಲ್ಲಿ ತಮ್ಮ 33 ವಸಂತಗಳನ್ನು ಕಳೆದಿದ್ದರು. ಅವರು ಕಣ್ಣು ಮುಚ್ಚಿ ಹೃದಯದಿಂದ ವಿವರಿಸುತ್ತಿದ್ದರು. ಬ್ರಿಟಿಷರು ತಮ್ಮ ವಿಲಾಸಿ ಜೀವನಕ್ಕೆ ಈ ದ್ವೀಪವನ್ನು ಬಳಸಿಕೊಂಡಿದ್ದರು. ಇದನ್ನು ಅಂಡಮಾನ್ ರಾಜಧಾನಿಯನ್ನಾಗಿ ಮಾಡಿ, ಸೆಲ್ಯುಲಾರ್ ಜೈಲನ್ನು ನಿಯಂತ್ರಿಸುತ್ತಿದ್ದರು. ನೀರು ಶುದ್ಧೀಕರಣ ಘಟಕ, ಟೆನಿಸ್ ಕೋರ್ಟ್, ಬೇಕರಿ, ಹಲವಾರು ಉಪಯುಕ್ತ ಐಷಾರಾಮಿ ಕಟ್ಟಡಗಳು ಹೀಗೆ ಎಲ್ಲಾ ಬಗೆಯ ಅನುಕೂಲ ಹೊಂದಿದ್ದರು. ವಿಪರ್ಯಾಸ ಎಂದರೆ ಈ ಎಲ್ಲಾ ಅನುಕೂಲಗಳು ನಮ್ಮ ಸ್ವಾತಂತ್ರ್ಯ ಹೋರಾಟಗಾರರ ಬೆವರಿನ ಫಲವಾಗಿತ್ತು. ಆದರೆ ಆಗ ಬ್ರಿಟಿಷರನ್ನು ಕಾಡಿದ್ದು ಭಯಾನಕ ಸೊಳ್ಳೆಗಳು ಹಾಗು ಕಲುಷಿತ ನೀರು. ಇದರಿಂದಾಗಿ ಹಲವಾರು ಬ್ರಿಟಿಷರು ಪ್ರಾಣ ಕಳೆದುಕೊಂಡರು. ಕಾಲಾಂತರದಲ್ಲಿ ರೊಸ್



ಭೂಕಂಪದ ಹೊಡೆತ ಹಾಗು ಜಪಾನ್‌ರ ಹಿಡಿತಕ್ಕೆ ಸಿಲುಕಿ ನಾಶಗೊಂಡು ಈಗ ಅದರ ಅವಶೇಷಗಳು ಮಾತ್ರ ನೋಡಬಹುದು. ಅಳಿದುಳಿದ ಕಟ್ಟಡಗಳ ಮೇಲೆ ಗಿಡ ಬೆಳೆದು ಮರವಾಗಿ ಅದರ ಬೇರುಗಳೆಲ್ಲಾ ಸುತ್ತಲೂ ಆವರಿಸಿ ಸುಂದರ ಕಲಾಕೃತಿಯಂತಾಗಿದೆ.

ಎಲ್ಲವನ್ನೂ ಮನದಾಳದಿಂದ ವಿವರಿಸುತ್ತಿದ್ದ ಅನುರಾಧಳ ಜೊತೆ ನಾವೆಲ್ಲಾ ಸಾಗುತ್ತಿರುವಾಗ ಜಿಂಕೆಯೊಂದು ನಮ್ಮೊಡನೆ ಬರುತ್ತಿತ್ತು. ಅನುರಾಧಾ ಜಿಂಕೆಯೊಡನೆ ಮಾತನಾಡುತ್ತಿದ್ದರು. ಅದಕ್ಕೆ ಅರ್ಥ ಆಗುವ ಹಾಗೆ ನಮಗೆ ಭಾಸವಾಗುತ್ತಿತ್ತು. ಆಗ ನಮ್ಮಗೆಲ್ಲಾ ಒಂದು ಆಶ್ಚರ್ಯ ಕಾದಿತ್ತು. ಅನುರಾಧಾ ಒಂದು ವಿಧವಾದ ಶಬ್ದ ಮಾಡಿದರು. ಆ ಕ್ಷಣವೇ ಎಲ್ಲಾ ಕಡೆಯಿಂದ ಹಲವಾರು ಜಿಂಕೆಗಳು, ನವಿಲುಗಳು ಓಡೋಡಿ ಬಂದವು. ಅನುರಾಧಾ ಎಲ್ಲಾ ಪ್ರಾಣಿ ಪಕ್ಷಿಗಳಿಗೆ ತಿನ್ನಲು ಬ್ರೆಡ್ ಕೊಟ್ಟರು. ನಾವು ಪ್ರಾಣಿ ಪಕ್ಷಿಗಳಿಗೆ ಬ್ರೆಡ್ ಕೊಟ್ಟು ಸಂತೋಷ ಪಟ್ಟೆವು. ಅಲ್ಲಿಗೆ

ನಮ್ಮ ಎರಡನೇ ದಿನ ಮುಗಿದು ಊಟಕ್ಕೆ ಹೋಟೆಲ್ ಕಡೆ ಹೊರಟೆವು.

ನವೆಂಬರ್ 23, ಅಂಡಮಾನ್ ಪ್ರವಾಸದ ಮೂರನೇ ದಿನ. ನಾವೆಲ್ಲ ಬೆಳಗ್ಗೆ 6.30ಗೆ ತಿಂಡಿಗೆ ಹೋಗಬೇಕಿತ್ತು. ಅಲ್ಲಿ ಬೆಳಗ್ಗೆ 4.30ಗೆ ಬೆಳಕಾಗುವ ಕಾರಣ, ಎಲ್ಲರೂ ಸರಿಯಾಗಿ 6.30ಗೆ ತಿಂಡಿಗೆ ಸೇರಿದೆವು. ತರಾವರಿ ತಿಂಡಿಗಳು, ಮೊಗದಲ್ಲಿ ನಗು. ಆಫೀಸ್, ಅಡಿಗೆ, ಕಾಲೇಜು ಹೀಗೆ ಯಾವ ಜಂಜಾಟವು ಇಲ್ಲ. ವಿವಿಧ ರೀತಿಯ ಉಡುಪುಗಳಿಂದ ಮಿಂಚುತ್ತಿದ್ದ ಎಲ್ಲರನ್ನು ನೋಡುವುದೇ ಹಬ್ಬ. ಬದುಕು ಹೀಗೆ ಇದ್ದರೆ ಎಷ್ಟು ಚೆಂದ.

ಈ ದಿನ ನಾವು ಅಂಡಮಾನ್‌ನಿಂದ ಸುಮಾರು 67 ಕಿ.ಮಿ. ದೂರದ ಹಾವ್ ಲಾಕ್ (Havelock) ದ್ವೀಪಕ್ಕೆ ಹೋಗಬೇಕಿತ್ತು. ನಾವೆಲ್ಲರೂ ಬ್ಯಾಗ್‌ಗಳನ್ನು ತೆಗೆದುಕೊಂಡು ಪೋರ್ಟ್ ಬ್ಲೇರ್ ಬಂದರಿಗೆ ಬಂದೆವು. ಅಲ್ಲಿ ನಮಗಾಗಿ ಮ್ಯಕ್ ರೂಸ್ ಎಂಬ ಹಡಗು ಕಾಯುತ್ತಿತ್ತು. ಸಾಲಾಗಿ ಎಲ್ಲರನ್ನು ತಪಾಸಣೆ ಮಾಡಿ ಒಳಗೆ ಕಳುಹಿಸಿದರು. ಮೊದಲ ಬಾರಿ ಹಡಗಿನಲ್ಲಿ ಪಯಣಿಸು ವವರಿಗೆ ಅದ್ಭುತ ಅನುಭವ. ಹಾಸ್ಯಭರಿತ ಮಾತುಗಳನಾಡುತ್ತಾ ಇಹಲೋಕದ ಪರಿವೇ ಇಲ್ಲದೆ ಸುಮಾರು 3 ಗಂಟೆಯ ಪ್ರಯಾಣ ಗೊತ್ತೇ ಆಗಲಿಲ್ಲ. ಹಾವ್ ಲಾಕ್ ತಲುಪಿದಾಗ ಹೊಟ್ಟೆ ಚುರುಚುರು ಅನ್ನುತ್ತಿತ್ತು. ಬಂದರ್‌ನಿಂದ 5 ನಿಮಿಷ ನಡೆದಾಗ ಸಿಕ್ಕಿದ ಬೀಚಿಸೈಡ್ ವರ್ಜಿನ್ ರೆಸಾರ್ಟ್‌ನಲ್ಲಿ ಭರ್ಜರಿ ಭೋಜನ ಮಾಡಿ, ಸ್ವಲ್ಪ ವಿಶ್ರಾಂತಿ ತೆಗೆದುಕೊಂಡು, ಎಲ್ಲರೂ ರಾಧಾನಗರ ಬೀಚ್‌ಗೆ ಹೊರಟೆವು.

ರಾಧಾನಗರ ಬೀಚ್, ಏಶಿಯಾದ ಅತ್ಯಂತ ಸುಂದರ ಬೀಚ್‌ಗಳಲ್ಲಿ ಒಂದು. ಗೋಧಿ ಹಿಟ್ಟಿನಂತೆ ನುಣುಪಾದ ಬಿಳಿ ಮರಳು, ದಟ್ಟ ಕಡು ನೀಲಿ ಬಣ್ಣದ ಜಲರಾಶಿ, ದಟ್ಟ ಹಸಿರು ಕಾಡುಗಳಿಂದ ಕಣ್ಮನ ಸೆಳೆಯುವ ವಿಶಾಲವಾದ ನಿಷ್ಕಲ್ಮಶ ಪ್ರಕೃತಿ. ಈಜು ಬರುವವರು ವೀರಾವೇಶದಿಂದ ಸಮುದ್ರದ ಒಳಗೆ ಹೋದರು. ಬರದೇ ಇದ್ದವರು ಕೈ ಕೈ ಹಿಡಿದು ಕೊಂಡು ಒಬ್ಬರಿಗೊಬ್ಬರು ಆಸರೆಯಾಗಿ ನೀರಿನ ಆಳಕ್ಕೆ ಹೋಗುವ ಪ್ರಯತ್ನ ಪಡುತ್ತಿದ್ದೆವು. ಸಮುದ್ರದ ಅಲೆಗಳು ಉಕ್ಕಿ ಬಂದಾಗ ಎಲ್ಲರೂ ತರಗೆಲೆಗಳಂತೆ ತೇಲುತ್ತಿದ್ದೆವು. ಜೀವನವೆಂಬ ಸಮುದ್ರದಲ್ಲಿ ಮುಳುಗುವುದು, ತೇಲುವುದು ಅನಿವಾರ್ಯ. ದೊಡ್ಡ ದೊಡ್ಡ ಅಲೆಗಳು ಎಲ್ಲರನ್ನು ಎತ್ತಿ ಬಿಸಾಡಿ ಖುಷಿ ಪಡುತ್ತಿತ್ತು. ನಾವು ಅದನ್ನು ಮೆಟ್ಟಿ ನಿಂತು ಖುಷಿ ಪಡುತ್ತಿದ್ದೆವು. ಸಾಕಷ್ಟು ಹೊತ್ತು ಆಟವಾಡಿ ನಾವೆಲ್ಲ ಹೋಟೆಲ್‌ಗೆ ಬಂದೆವು. ಅಲ್ಲಿಗೆ ನಮ್ಮ 3ನೇ ದಿನ ಮುಗಿಯಿತು.

ನವೆಂಬರ್ 24, ಪ್ರವಾಸದ ನಾಲ್ಕನೇ ದಿನ. ಈಗಾಗಲೇ ನಮಗೆ ಬೆಳಗ್ಗೆ ಬೇಗ ಎದ್ದು ಅಂದವಾದ ಶೈಲಿಯಲ್ಲಿ ಹೊರಟು ರುಚಿಯಾದ ತಿಂಡಿ ಸವಿಯುವುದು ಅಭ್ಯಾಸ ಆಗಿ ಹೋಗಿತ್ತು. ಕಾಲಾಪತ್ತರ್ ಎಂಬ ಬೀಚ್‌ಗೆ ನಾವು ಹೊರಟೆವು. ಅಲ್ಲಿ ನೀರಿನ ತಳದಲ್ಲಿ ಕಪ್ಪು ಕಲ್ಲುಗಳ ರಾಶಿಯ ಕಾರಣ ಈಜುವುದು ನಿಷಿದ್ಧ. ಛಾಯಾಗ್ರಾಹಕರ ಕನಸಿನ ತಾಣವಾಗಿತ್ತು. ನಾವು ಅಲ್ಲಿ ತಲುಪಿದಾಗ ಸುಮಾರು 10 ಗಂಟೆ. ನಾವು ಅಲ್ಲಿ ನೋಡಿದ ದೃಶ್ಯ, ಇದೇನು ನಿಜವೋ ಅಥವಾ ಸಿನಿಮಾ ದೃಶ್ಯವೋ ಎಂದು ಭಾಸವಾಯಿತು. ಸಾಲಾಗಿ ನಿಂತ ಮರಗಳ ಮಧ್ಯೆ ತಿಳಿ ನೀಲಿ ಬಣ್ಣ ಅದ್ಭುತ ಕಲಾಕೃತಿಯಂತಿತ್ತು. ನುಣುಪಾದ ರೇಷ್ಮೆಯಂತಹ ಬಿಳಿ ಬಣ್ಣದ ಮರಳು, ಅದಕ್ಕೆ ಹೊಂದಿಕೊಂಡು ಅತೀ ತಿಳಿ ನೀಲಿ ಬಣ್ಣ, ನೀರಿನ ಬಣ್ಣ ತಿಳಿನೀಲಿಯಿಂದ ಶುರು ಆಗಿ ಹಸಿರು, ನೀಲಿ, ಕಡು ನೀಲಿ, ಕಪ್ಪು ಬಣ್ಣದಿಂದ ಕಂಗೊಳಿಸುತ್ತದೆ. ಅಲ್ಲಲ್ಲಿ ಒಣಗಿದ ಮರಗಳು, ನಿಜಕ್ಕೂ ಛಾಯಾಗ್ರಾಹಕನಿಗೆ ಹಬ್ಬ. ಈ ಮೊಬೈಲ್ ಯುಗದಲ್ಲಿ ಎಲ್ಲರೂ ಛಾಯಾಗ್ರಾಹಕರೆ, ಫೋಟೋಗಳ, ಸೆಲ್ಫಿಗಳ ಸುರಿಮಳೆ ಯಾಗುತ್ತಿತ್ತು. ಅಲ್ಲಿ ಸಿಗುವ ಕಪ್ಪೆಚಿಪ್ಪಿನ ಹಾಗು ಶಂಖಗಳ ಆಭರಣಗಳು ಅತೀ ಸುಂದರವಾಗಿದ್ದವು. ಎಲ್ಲಾ ತರಹದ ಮಣಿಗಳ ಆಭರಣಗಳು ಆಕರ್ಷಣೀಯವಾಗಿತ್ತು. ನಾವೆಲ್ಲ ಉತ್ಸಾಹದಿಂದ ವ್ಯಾಪಾರ ಮಾಡಿ ಹೋಟೆಲ್‌ಗೆ ಹಿಂತಿರುಗುವಾಗ ಅಲ್ಲಿಯ ಪ್ರಸಿದ್ಧ ಎಳನೀರು ಕುಡಿಯಲು ಮರೆಯಲಿಲ್ಲ. ಕಾಲಾಪತ್ತರ್ ಬೀಚಿನ ಸೌಂದರ್ಯ ಮನಸ್ಸಿನಲ್ಲಿ ಅವರಿಸಿರುವಾಗ, ರೆಸಾರ್ಟ್ ಊಟದ ರುಚಿ ಹೆಚ್ಚಿತು. ಅಂಡಮಾನ್ ನಲ್ಲಿ ವಿರಳವಾದ ಮೊಸರು ಅಮೃತದಂತಿತ್ತು. ಅಲ್ಲಿಂದ ನಾವು ಪೋರ್ಟ್ ಬ್ಲೇರ್‌ಗೆ ಹಿಂತಿರುಗಬೇಕಿತ್ತು. ಹಿಂತಿರುಗುವಾಗ ಹಡಗಿನಲ್ಲಿ ನಮ್ಮವರೇ ಸಮುದ್ರಸಖಿಯ ಹಾಗೆ ನಮ್ಮನ್ನೆಲ್ಲಾ ಉಪಚರಿಸಿದ ರೀತಿ ತುಂಬಾ ಖುಷಿ ಕೊಟ್ಟಿತ್ತು. ಹಾವ್ ಲಾಕ್ಗೆ ಬಾಯ್ ಹೇಳಿ ಪೋರ್ಟ್ ಬ್ಲೇರ್‌ಗೆ ಹಾಯ್ ಎಂದೆವು. ಅಲ್ಲಿಗೆ ನಮ್ಮ ನಾಲ್ಕನೇ ದಿನ ಮುಗಿದಿತ್ತು.

ನವೆಂಬರ್ 25, ಪ್ರವಾಸದ 5ನೇ ದಿನ ಹಾಗೂ ಕೊನೇ ದಿನ. ಅಂಡಮಾನ್ ವಸ್ತುಸಂಗ್ರಹಾಲಯ ಹಾಗು ಸೆಲ್ಯೂಲಾರ್ ಜೈಲ್ ನೋಡಿ ಬೆಂಗಳೂರಿಗೆ ಹಿಂತಿರುಗುವ ಕಾರ್ಯಕ್ರಮ. ಮೊದಲು ವಸ್ತುಸಂಗ್ರಹಾಲಯಕ್ಕೆ ಹೊರಟೆವು. ಅಲ್ಲಿಯ ಆದಿವಾಸಿಗಳ ಬಗ್ಗೆ ವಿವರವಾದ ಚಿತ್ರಣದಲ್ಲಿ, ಅವರ ಸಂಸ್ಕೃತಿ, ಬದುಕಿನ ಬಗ್ಗೆ ಉಲ್ಲೇಖವಿದೆ. ಅಲ್ಲಿ ಒಂದು ಸುತ್ತು ಹಾಕಿ ಸೆಲ್ಯುಲಾರ್ ಜೈಲ್ ಕಡೆ ಹೊರಟೆವು. ಸೆಲ್ಯುಲಾರ್ ಜೈಲ್‌ನ ಮತ್ತೊಂದು ಹೆಸರು ಕಾಲಾಪಾನಿ. ಇದರ ನೇರ ಅರ್ಥ ಕಪ್ಪು ನೀರು.

ಆದರೆ ಸಮಂಜಸವಾದ ಅರ್ಥ ಕಾಲಾ ಎಂದರೆ ಸಮಯ, ಮರಣ. ಬ್ರಿಟಿಷರ ಆಡಳಿತದಲ್ಲಿ ಅಲ್ಲಿಗೆ ಒಂದು ಬಾರಿ ಪ್ರವೇಶಿಸಿದರೆ ಮರಣ ನಿಶ್ಚಿತ. ಭಾರತ ಸರ್ಕಾರವು ಸೆಲ್ಯುಲಾರ್ ಜೈಲ್‌ಗೆ ರಾಷ್ಟ್ರೀಯ ಸ್ಮಾರಕ ಸ್ಥಾನ ಕೊಟ್ಟು ಗೌರವಿಸಿದೆ. 1857 ಇಸವಿಯಲ್ಲಿ ನಡೆದ ಸಿಪಾಯಿ ದಂಗೆಯಲ್ಲಿ ಪಾಲ್ಗೊಂಡ ಸುಮಾರು 200 ಜನರನ್ನು ಭಾರತ ನೆಲದಿಂದ, ಜನರಿಂದ ಪ್ರತ್ಯೇಕಿಸಲು ಸಾವಿರಾರು ಮೈಲು ಜಲಾವೃತಗೊಂಡಿರುವ ಅಂಡಮಾನ್‌ಗೆ ಕರೆತಂದರು. ಅಲ್ಲಿಂದ ಪ್ರಾರಂಭವಾಯಿತು ಜೀವಂತ ನರಕ. ತದನಂತರ 1896 –1906 ಇಸವಿಯವರೆಗೆ ಕಟ್ಟಿದ ಈ ಜೈಲು, ಬರೀ ಜೈಲಾಗಿರಲಿಲ್ಲ, ನರಕದ ಪ್ರತಿರೂಪವಾಗಿತ್ತು. ಸ್ವಾತಂತ್ರ್ಯ ಹೋರಾಟದಲ್ಲಿ ತೀವ್ರ ಹೋರಾಟ ಮಾಡುವವರು ಇಲ್ಲಿ ಶಿಕ್ಷೆಗೆ ಒಳಪಡುತ್ತಿದ್ದರು. 1909–1931 ಇಸವಿಯವರೆಗೆ ಜೈಲರ್ ಆಗಿದ್ದ ಡೇವಿಡ್ ಬಾರಿ (David Barrie)ಯ ಹಿಡಿತದಲ್ಲಿ ಶಿಕ್ಷೆಯು ಅತ್ಯಂತ ಘೋರವಾಗಿದ್ದು ಇತಿಹಾಸದ ಕರಾಳ ಪುಟವನ್ನು ಸೇರಿತು.

ಸ್ವಾತಂತ್ರ್ಯ ಹೋರಾಟಗಾರರು ಬೆವರು ಸುರಿಸಿ ರಕ್ತ ಹರಿಸಿ ಕಟ್ಟಿದ ಜೈಲಿನಲ್ಲಿ ಅವರನ್ನೇ ಬಂಧಿಸಿ ಶಿಕ್ಷಿಸಿದ್ದು ವಿಪರ್ಯಾಸ. ಮಧ್ಯದ ಒಂದು ಕಟ್ಟಡಕ್ಕೆ ಏಳು ರೆಕ್ಕೆ ಗಳಂತಹ ಕಟ್ಟಡಗಳು ಹೊಂದಿಕೊಂಡಿತ್ತು. ಪ್ರಕೃತಿಯ ವಿಕೋಪಕ್ಕೆ ಸಿಲುಕಿ 4 ರೆಕ್ಕೆಗಳು ನಾಶಗೊಂಡಿದೆ. ಈಗ ಆ ಸ್ಥಳದಲ್ಲಿ ಉಚಿತ ಸರ್ಕಾರಿ ಆಸ್ಪತ್ರೆ ಇದೆ. ಒಟ್ಟು 696 ಸಣ್ಣ ಕೋಣೆಗಳು. ಯಾವ ಒಂದು ಕೋಣೆಯು ಒಂದಕ್ಕೊಂದು ಕಾಣುತ್ತಿರಲಿಲ್ಲ. ಬಂಧಿಗಳಿಗೆ ಮಣ್ಣಿನ ಮಡಿಕೆ, ತಟ್ಟೆ, ಮಲಗಲು ಮರದ ಹಲಗೆ ಇಷ್ಟೇ. ದಿನಕ್ಕೆ ಮೂರು ಸಲ ನಿಸರ್ಗ ಕರೆಗೆ ಬಿಡುತ್ತಿದ್ದರು. ಉಳಿದಂತೆ ಅವರು ಮಣ್ಣಿನ ಮಡಿಕೆ ಉಪಯೋಗಿಸಿ, ಮರುದಿನ ವಿಸರ್ಜಿಸಬೇಕಿತ್ತು. ಅವರನ್ನು ಅವರವರ ಹೋರಾಟದ ತೀವ್ರತೆಗೆ ತಕ್ಕಂತೆ ಕಬ್ಬಿಣದ ಸರಪಳಿಯಲ್ಲಿ ಕಟ್ಟುತ್ತಿದ್ದರು. ಕೆಲವರಿಗಂತೂ ಕೈಕಾಲು ಅಲ್ಲಾಡಿಸಲೂ ಅಸ್ಪದವಿರಲ್ಲಿಲ್ಲ. ದಿನನಿತ್ಯ ಶಕ್ತಿಗೆ ಮೀರಿ ತೆಂಗಿನಕಾಯಿ ಸುಲಿಯಬೇಕಿತ್ತು. ಎಣ್ಣೆ ತೆಗೆಯುವ ಕಲ್ಲು ಬಳಸಿ 15–16 ಲೀಟರ್ ಎಣ್ಣೆ ತೆಗಿಯಬೇಕಿತ್ತು. ಇಷ್ಟು ಕೆಲಸ ಮಾಡದಿದ್ದರೆ, ಅವರನ್ನು ಕಟ್ಟಿ, ಹಿಂಭಾಗ ಸೀಳುವ ಹಾಗೆ ಹೊಡೆದು, ರಕ್ತ ಸುರಿದ ಮೇಲೆ ಗೋಣಿಚೀಲದ ಉಡುಪು ಧರಿಸಲು ಕೊಡುತ್ತಿದ್ದರು. ಮೂರು ಗಲ್ಲು ಕಂಬಗಳಿದ್ದು, ಅಸಂಖ್ಯಾತ ಜನರನ್ನು ಗಲ್ಲಿಗೇರಿಸುತ್ತಿದ್ದರು. ಇದಕ್ಕಿಂತ ಭಯಾನಕ ಎಂದರೆ, ಉಪವಾಸ ಸತ್ಯಾಗ್ರಹ ಮಾಡುವವರನ್ನು ಮಲಗಿಸಿ ಬಲವಂತವಾಗಿ ಬಾಯಿಗೆ ಗಂಜಿ ಸುರಿದು ಸಾಯಿಸುವುದು. ಇವರೆಲ್ಲ ಇಷ್ಟು ಚಿತ್ರಹಿಂಸೆ ಪಟ್ಟಿದ್ದು ಯಾಕೆ? ಆಸ್ತಿಗೂ ಅಲ್ಲ ಅಧಿಕಾರಕ್ಕೂ ಅಲ್ಲ.



ದೇಶವನ್ನು ಗುಲಾಮಗಿರಿಯಿಂದ ಬಿಡಿಸಲು, ಮುಂದಿನ ಪೀಳಿಗೆ ಸ್ವತಂತ್ರವಾಗಿ ಉಸಿರಾಡಲು. ಸಾವು ಖಡಾಖಂಡಿತ ಎಂದು ಗೊತ್ತಿದ್ದರೂ ಹೋರಾಟಕ್ಕೆ ಮುನ್ನುಗ್ಗುತ್ತಿದ್ದರು. ಆ ಯುವಕರ ಅಪ್ಪ ಅಮ್ಮನ ಮನಸ್ಥಿತಿ ಹೇಗಿದ್ದಿರಬಹುದು?

ನಾವೆಲ್ಲರೂ ಗೈಡ್ ಕೊಡುವ ವಿವರಣೆ ಕೇಳುತ್ತಿದ್ದೆವು. ಮನಸ್ಸು ಕುಗ್ಗಿ ಹೋಗಿತ್ತು. ಅಂತಹ ಸಮಯದಲ್ಲಿ ಕೊನೆಯ ಕೋಣೆಯಲ್ಲಿ ದೇಶಭಕ್ತಿ ಗೀತೆ ಕೇಳುತ್ತಿತ್ತು. ಆ ಕೋಣೆಯಲ್ಲಿ ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರ ವಿನಾಯಕ ದಾಮೋದರ ಸಾರ್ವಕರ್ ತಮ್ಮ ಹನ್ನೊಂದು ವರ್ಷಗಳನ್ನು ಬಂಧಿಯಾಗಿ ಕಳೆದಿದ್ದರು. ಅವರ ಹೆಸರನ್ನು ಪೋರ್ಟ್ ಬ್ಲೇರ್ ವಿಮಾನನಿಲ್ದಾಣಕ್ಕೆ "ವೀರ್ ಸಾರ್ವಕರ್ ಇಂಟರ್ ನ್ಯಾಷನಲ್ ಏರ್‌ಪೋರ್ಟ್" ಎಂದು ಕರೆದು ಗೌರವಿಸಿದ್ದಾರೆ. ಇಲ್ಲಿಗೆ ತಮ್ಮ ಪ್ರವಾಸ ಮುಗಿದು, ಬೆಂಗಳೂರಿಗೆ ಹೋಗುವ ಸಮಯ. ಕೊನೆಯದಾಗಿ ಹೋಟೆಲ್ ಹೋಗಿ ಊಟ ಮುಗಿಸಿ, ಎಲ್ಲರೂ ಗ್ರೂಪ್ ಫೋಟೋ ತೆಗೆದು, ವಿಮಾನನಿಲ್ದಾಣಕ್ಕೆ ಬಂದೆವು. ಅಲ್ಲಿ ಕುಳಿತು ಹಾಗೇ ಯೋಚಿಸಿದಾಗ, ನಾವು ಅಂಡಮಾನ್‌ಗೆ 39 ಜನರು ಬಂದ್ದಿದ್ದು ಸೌಂಡ್ ಅಂಡ್ ಲೈಟ್ ಶೋ ನಲ್ಲಿ ನಿಶ್ಚಲ್ "ಭಾರತ್ ಮಾತಾಕೀ ಜೈ" ಎಂದ ಕ್ಷಣ, ಶೈಲಜಾರವರ ದೈವೀಕ ಧ್ವನಿಯಲ್ಲಿ ಕೇಳಿದ ಹಾಡುಗಳು, ಶೋಭ ಗಿರೀಶ್ ರವರು ಎಲ್ಲರನ್ನೂ ಸೇರಿಸಿಕೊಂಡು ಆಡಿಸಿದ ಆಟಗಳು, ಕಿರುಚಿ ಹಾಡಿದ ಅಂತ್ಯಾಕ್ಷರಿ, ಮೈಚಳಿ ಬಿಟ್ಟು ಮಾಡಿದ ನೃತ್ಯ, ಹೌಸಿ ಆಟದಲ್ಲಿ ಗೆದ್ದಾಗ ಮಕ್ಕಳಂತೆ ಕುಣಿದಿದ್ದು, ಬೀಚ್ ಸೈಡ್ ನಡಿಗೆ, ರಾತ್ರಿ ಬೀಚ್ ಹತ್ತಿರ ಕೇಳಿದ ಪ್ರಶ್ನೆಗಳು, ಉತ್ತರಗಳು, ಜೋಕ್ ಎಲ್ಲವೂ ಚಿತ್ರ ಪಟದಂತೆ ಹಾದು ಹೋಯಿತು.

ಕೊನೆಗೆ ಮನಸ್ಸಿನಾಳದಲ್ಲಿ ಸೇರಿದ್ದು ರೋಸ್ ಐಲ್ಯಾಂಡ್‌ನ ಅನುರಾಧಾಳ ಮಾತು "ನನ್ನ ದೇಶದ ಸ್ವತಂತ್ರಕ್ಕಾಗಿ ಎಷ್ಟೋ ನನ್ನ ಸಹೋದರರು ಪ್ರಾಣ ತೆತ್ತಿದ್ದಾರೆ, ಇದನ್ನು ಹಾಳು ಮಾಡಬೇಡಿ"

# ಪತ್ರ ಪುಷ್ಪದ ದೆಹಲಿ ರಂಗೋಲಿ

ದೆಹಲಿ ಎಂದರೆ ಸಂಸ್ಕೃತದಲ್ಲಿ ಹೊಸಿಲು. "ಪತ್ರಂ ಪುಷ್ಪಂ ಫಲಂ ತೋಯಂ" ಎಂದು ನಮ್ಮ ಸುತ್ತಲಿನ ಹಸಿರು ಸಿರಿ ಮತ್ತು ನೀರು ಬಳಸಿ ಹೊಸ್ತಿಲನ್ನೆ ಪೂಜೆ ಮಾಡುವ ವಿಧಾನವಿದೆ. ಅದು ಮಹಿಳೆಯರೇ ಕೈಗೊಳ್ಳುವ ಪೂಜೆ. ಮನೆಯ ಹೊಸಲು ಪೂಜಿಸುವ ವಿಧಾನ ಕರಾವಳಿಯ ಬ್ರಾಹ್ಮಣ ಸಮುದಾಯದಲ್ಲಿದೆ. ಗೌಡ ಸಾರಸ್ವತ ಸಮಾಜದ ಮಹಿಳೆಯರಲ್ಲಿ ಚೂಡಿ ಎಂಬ ವಿಶೇಷ ಪೂಜೆಯಲ್ಲಿ ಹೂ ಮತ್ತು ಎಲೆಗಳ ಕಟ್ಟು ಬಳಸುವವರು. ದಾನ ಮಾಡುವರು. ಇದೆಲ್ಲದರ ಹಿಂದೆ ಸಂಸ್ಕೃತಿಯ ಬಿಂಬ ಮಾತ್ರ ಅಲ್ಲ. ಆರೋಗ್ಯ ಕಾಳಜಿ ಸಹ ಇದೆ.

ನೀರು ಕಡ್ಡಿ, ಬಾಚಣಿಗೆ ಪುಷ್ಪ, ಜರಿಗಿಡ, ನೆಲ ಸಂಪಿಗೆ, ಶ್ರಾವಣ ಹೂ, ರಥ ಹೂ, ಕೆಂಜೇರಲು ಅಥವಾ ರತ್ನಗಂಧೀ ಹೀಗೆ ಪಟ್ಟಿ ಉದ್ದವಾಗುತ್ತದೆ. ಅಂತಹ ಹೂವು ಮತ್ತು ಎಲೆಗಳನ್ನು ಮನೆಯ ಸುತ್ತು ಮುತ್ತಲಿನ ಪರಿಸರ ದಿಂದ ಹೆಕ್ಕಿ ತರುವರು. ಮುಂಜಾನೆಯ ವೇಳೆ ಮನೆಯ ಬಾಗಿಲ ಹೊಸಿಲು ಪೂಜೆಯ ಬಳಕೆಗದು ಬೇಕು. ಏನಿದು ಈ ಹೊಸಲು ಪೂಜೆ? ಇದರ ಹಿಂದಿನ ಮರ್ಮ ಮತ್ತು ಧರ್ಮ ಏನು? ಅರಿಯೋಣವೆ?

ಮುಂಜಾನೆಯ ವೇಳೆ ಸ್ನಾನ ಮಾಡಿ ಮಡಿಯುಟ್ಟ ಮಹಿಳೆಯರು ಹಿತ್ತಾಳೆ ಗಿಂಡಿ ತುಂಬ ನೀರು, ತಟ್ಟೆ ತುಂಬ ಹೂವು., ಎಲೆ, ಅರಶಿನ ಕುಂಕುಮ, ದೀಪ, ಧೂಪ ಮತ್ತು ನೈವೇದ್ಯ ಮಾಡಲು ಹಣ್ಣು, ಬೆಲ್ಲ, ಹಾಲು ಸಿದ್ಧ ಮಾಡುವರು. ಹೊಸಲು ಪೂಜೆ ಆರಂಭ ಆದ ಮೇಲೆ ಅದು ಮುಗಿಯುವ ತನಕ ಯಾರೂ ಆಚೀಚೆಗೆ ದಾಟಬಾರದು. ದೀಪ ಆರದಂತೆ ಎಚ್ಚರಿಕೆ ವಹಿಸುವವರು. ಮೊದಲಿಗೆ ಗಿಂಡಿಯ ತೋಯದಿಂದ ಹೊಸ್ತಿಲಿಗೆ ಅಭಿಷೇಕ. ಅನಂತರ ಹೊಸ್ತಿಲಿಗೆ ಅಂದದ ಗಟ್ಟಿಜೇಡಿ ತೇವ ಮಾಡಿ ಸುಂದರ ಚಿತ್ರಗಳ ರಚನೆ. ಸಾಮಾನ್ಯವಾಗಿ ಅದು ಗರಿಕೆ ತುದಿಯ ಆಕಾರದ್ದು. ಆಚೀಚಿನ ಅಂಚು ಚಿತ್ರ ಬೇರೆ. ನಡು ಮಧ್ಯದ ಚಿತ್ರ ಬೇರೆ. ಅದರ ಮೇಲೆ ಬಗೆಬಗೆಯ ಎಲೆ, ಹೂಗಳ ಅಲಂಕಾರದ ಸಜಾವಣೆ. ಅರಶಿನ ಕುಂಕುಮದ ಲೇಪನ. ಹಣ್ಣು, ಕಾಯಿ, ಹಾಲಿನ ಸಮರ್ಪಣೆ. ಅನಂತರ ಊದುಕಡ್ಡಿ, ಧೂಪದ ಆರತಿ. ಅದಾದ ಬಳಿಕ ಸಾಷ್ಟಾಂಗ ನಮಸ್ಕಾರ.

ಮನೆಯ ಮಕ್ಕಳಿಗೆ ಎರಡು ಕೆಲಸ. ಮೊದಲನೆಯದು ಪರಿಸರದ ಎಲೆ, ಹೂ ಆಯ್ದು ತರುವುದು. ಅಮ್ಮನಿಗೆ ಯಾವಾವ ಗಿಡ, ಬಳ್ಳಿ, ಹೂ ಎಂದು ಮೊದಲೇ ತಿಳಿದಿರುತ್ತದೆ. ಅದನ್ನು ಮಕ್ಕಳಿಗೆ ತೋರಿಸಿರುವರು. ಅದರ ಸಂಗ್ರಹ ಮಕ್ಕಳ ಕೆಲಸ. ಪೂಜೆ ಮುಗಿಯುವ ತನಕ ಅತ್ತಿಂದಿತ್ತ ದಾಟದ ಸ್ಥಿತಿ. ಉಳಿದವರಿಗೆ ಭೇಡಿಸಿ ಅವರಿಂದ ಬೈಗುಳ ಪಡೆಯುವ ಆಟ. ಕೊನೆಗೊಮ್ಮೆ ಪೂಜೆ ಮುಗಿದಾಗ ಅಮ್ಮ ಕೊಡುವ ಪ್ರಸಾದದ ಸವಿ ರುಚಿಗಾಗಿ ತವಕ. ಆದರೆ ಈ ಪೂಜೆಯ ಹಿಂದಿನ ನಿಜಾರ್ಥ ಮಾತ್ರ ಅತಿ ಸೋಜಿಗದ್ದು. ಭಾರತೀಯ ಆರೋಗ್ಯ ಕಾಳಜಿ ಮಾತ್ರ ಅಲ್ಲ.. ಮೌಖಿಕ ಪರಂಪರೆಯ ಶ್ರೇಷ್ಠತೆಯ ದ್ಯೋತಕ.

ಆಷಾಡದ ಕಷ್ಟದ ದಿನ ಕಳೆದಿರುತ್ತವೆ. ಆರೋಗ್ಯ ಮತ್ತು ಆದಾಯದ ಮಟ್ಟಿಗೆ ಸಹ ಅದನ್ನು ಆಚರಿಸುವ ಮಹಿಳೆಗೆ ತನ್ನ ಸುತ್ತಮುತ್ತಲಿನ ಪರಿಸರದ ಅಮೂಲ್ಯ ಗಿಡಮೂಲಿಕೆ ಪರಿಚಯಗೊಳಿಸಿ ಆಕೆಯ ತಿಳಿವಳಿಕೆ ಹೆಚ್ಚಿಸುವ ಏಕೈಕ ಅವಕಾಶ ಹೊಸ್ತಿಲ ಪೂಜೆಯ ಸಂಪ್ರದಾಯ. ಏಕೆಂದರೆ ಅದರಲ್ಲಿ ಬಳಸುವ ಒಂದೊಂದು ಮೂಲಿಕೆ ಸಹ ಜೀವನಾವಶ್ಯಕ, ಜೀವ ರಕ್ಷಕ, ಮನೆ ಮದ್ದಿನ ಅಗಣಿತ ಗುಣಗಳ ಗಣಿ. ಅಂತಹ ಮೂಲಿಕೆ ಬಳಕೆ ಮರೆತುಹೋಗದಂತೆ ಮಹಿಳೆಗೆ ಮತ್ತೆ ಮತ್ತೆ ನೆನಪಿಸುವ ಏಕೈಕಅವಕಾಶ ಅದು. ಅಜ್ಜಿಯಿಂದ ಮಗಳು, ಮೊಮ್ಮಗಳು ಹೀಗೆ ಮೌಖಿಕ ಮನೆಪಾಠ ಮುಂದುವರಿಕೆ. ಅಂದ ಹಾಗೆ ಕರಾವಳಿ ಜಿಲ್ಲೆಗಳಲ್ಲಿ ಸಹ ಆಷಾಢದಲ್ಲಿ ಮಗಳು ತಾಯಿಮನೆಯಲ್ಲಿ ವಾಸಿಸುತ್ತಿದ್ದ ಕಡ್ಡಾಯ ಹಿಂದೆ ಇತ್ತು. ತುಳು ಭಾಷಿಗರು ಅದನ್ನು 'ಆಟಿಕುಳ್ಳುನ' ಎಂದೇ ಕರೆವರು. ಆಟಿ ಅಮಾವಾಸ್ಯೆಯ ದಿನ ಪಾಲೆ ಎಂಬ ಮರದ ಹೊರ ಬೊಡ್ಡೆಯ ತೊಗಟೆ ಜಜ್ಜಿ ತಂದು ಅದರ ರಸ ಕುಡಿವ ವಿಧಾನ ಇಂದಿಗೂ ಆಚರಣೆಯಲ್ಲಿದೆ. ಅದು ಮಲೇರಿಯ, ಜಂತು, ಚರ್ಮರೋಗ ತಡೆಯುವ ರಾಮ ಬಾಣ. ಆಟಿ ಮುಗಿದು ಶ್ರಾವಣದ ಗಿಡ ಮೂಲಿಕೆ ಪಾಠ ಕಲಿತು ತವರಿನಿಂದ ಗಂಡನ ಮನೆಗೆ ಹೆಣ್ಣು ಮರಳುತ್ತಿದ್ದಳು. ಸಂಕ್ರಾಂತಿ ಅನಂತರ ಶ್ರಾವಣ ಪೂರ್ತಿ ಗಂಡನ ಮನೆಯಲ್ಲಿ ದೆಹಲಿ ಪೂಜೆ ನಡೆಯುತ್ತಿತ್ತು.

ಸೆಲಾಜಿನೆಲ್ಲ ಎಂಬ ಸಸ್ಯ ಮಳೆಗಾಲದ ದಿನಗಳಲ್ಲಿ ಮಾತ್ರಾ ಮೊಳೆತು ಹಸಿರಾಗುವ ಪರಿಸರದ ಸುಂದರ ಸಸ್ಯ. ಅದು ರಾಮಾಯಣ ಕಾಲದ ಸಂಜೀವಿನಿಯೆಂಬ ಚರ್ಚೆ

ಇದೀಗ ವಿಜ್ಞಾನ ಜಗತ್ತಿನಲ್ಲಿ ನಡೆದಿದೆ. ಆದು ಒತ್ತಡ ಕಳೆವ ಮತ್ತು ಸುಡುಗಾಯ, ಗಾಯ ಮಾಯಿಸುವ ಅಪೂರ್ವ ಗುಣದ್ದು ಎಂದು ಪ್ರಯೋಗಗಳಿಂದ ರುಜುವಾತಾಗಿದೆ. ಅಂತಹ ಜರಿಗಿಡವನ್ನು ಅಮ್ಮಂದಿರು ವರುಷಕ್ಕೊಮ್ಮೆ ಮನೆ ಬಾಗಿಲಿಗೆ ತಂದು ಪೂಜಿಸಿ ಉಪಕಾರ ನೆನೆವರು. ಅದಕೆ ಬಾಚಣಿಗೆ ಗಿಡ ಎಂಬ ಅನ್ವರ್ಥ ಹೆಸರಿದೆ. ಗಂಧ ಮಾದನ ಪರ್ವತಕ್ಕೆ ತೆರಳಿದ ಆಂಜನೇಯನು ಸಂಜೀವಿನಿ ಪತ್ತೆ ಹಚ್ಚಲಾಗಲಿಲ್ಲ. ಇಡಿಯ ಗಿರಿ ತಂದು ಲಕ್ಷ್ಮಣನಿಗೆ ಸ್ಮೃತಿ ಬರಿಸಿದ ರಾಮಾಯಣದ ಕತೆ ನಿಮಗೆ ಗೊತ್ತು. ಅಂತಹ ವಿಸ್ಮೃತಿ ನಮಗಾಗದಿರಲಿ ಎಂಬ ಜಾಣ್ಮೆ ನಮ್ಮ ಜನಪದರದ್ದು. ಅದಕ್ಕೆ ಹೊಸಿಲ ಪೂಜೆಯ ನೆಪ. ವರುಷಕ್ಕೊಮ್ಮೆ ಬಳಸುವ ಅವಕಾಶ. ಇನ್ನೊಂದು ಜಾತಿಯ ಜರಿಗಿಡದ ಹೆಸರು ಅಡಿಯಾಂಟಂ ಲುನುಲೇಟಂ. ಅದು ಸಹ ಅಮ್ಮಂದಿರ ಹೊಸಿಲು ಪೂಜೆಗೆ ಬಳಕೆಯಾಗುವ ಮೂಲಿಕೆ. ಸರ್ಪ ಸುತ್ತಿನ ಮತ್ತು ಸುಟ್ಟ ಗಾಯದ ಮದ್ದಿನ ಬಳಕೆ ಉಳ್ಳ ಮಳೆಗಾಲದ ಜರಿಸಸ್ಯವದು. ಮಂಡ್ಯದ ಕಡೆ ರತ್ನಗಂಧಿಗೆ ಕೆಂಜೇರಲು ಎಂಬ ಹೆಸರಿದೆ. ಅದು ಚರ್ಮ ಕಾಯಿಲೆಯ ಹೆಸರು ಸಹ. ಹಾಗಾಗಿ ಅದನ್ನು ಕಾಯಿಲೆ ಕಳೆವ ಸಸ್ಯವಾಗಿ ಬಳಸುತ್ತಿದ್ದರು. ಎಲೆಯಂತೂ ಮಲಬದ್ಧತೆಯ ರಾಮ ಬಾಣ. ಅದರ ಹೂ ಗೌಡಸಾರಸ್ವತರ ಚೂಡಿಗೆ ಬೇಕು. ಅಷ್ಟಕ್ಕೂ ಮಿಗಿಲಾಗಿ ಮಹಿಳೆಯರ ತಿಂಗಳ ತೊಂದರೆಗೆ ಮನೆ ಮದ್ದು ಬೇಕಲ್ಲ. ನೀರು ಕಡ್ಡಿ ಎಂಬ ಮಳೆಗಾಲದ ಮನೆಯಂಗಳದ ಸಸ್ಯದ ಗುಣ ಅಂತಹದು. ತುಂಬ ತಂಪು. ಯಾವುದೇ ತೆರನಾದ ರಕ್ತ ಸ್ರಾವ ನಿಲ್ಲಿಸುವ ಅಪೂರ್ವ ಮೂಲಿಕೆ ಅದು. ಅಂದ ಹಾಗೆ ಮೊನ್ನೆ ಒಬ್ಬ ವೈದ್ಯೆ ಮುಟ್ಟಿನ ಅತಿಸ್ರಾವಕ್ಕೆ ಸಂಪಿಗೆಯ ಎಲೆ ರಸ ಪಾನದ ಮನೆ ಮದ್ದು ಬಗ್ಗೆ ದೂರವಾಣಿಯಲ್ಲಿ ಪ್ರಶಂಸೆ ಮಾತು ನುಡಿದರು. ಅಂತಹ ಅದ್ಭುತ ಶಕ್ತಿ ನಮ್ಮ ಮನೆ ಮದ್ದಿನಲ್ಲಿದೆ. ಮದ್ದಿನ ಬಳಕೆಯ ಹೂವಿನ ಗಿಡಗಳಲ್ಲಿವೆ. ಅದು ಮರೆಯದಿರಲಿ ಎಂಬ ಬಳಕೆಯ ಮತ್ತು ಪೂಜೆ ಜಾಣ್ಮೆ ನಮ್ಮ ದೆಹಲಿಯ ಪೂಜೆ ಮತ್ತು ಜೀವನ ಸಜಾವಣೆಯಲ್ಲಿದೆ.

ಅಂದು ನೆಗಡಿಗೆ, ಸೀನಿಗೆ ವೈದ್ಯರ ಬಳಿಗೋಡುವ, ಸರತಿಯ ಸಾಲಿನಲ್ಲಿ ಕಾಯುವ ಹಂಗಿರಲಿಲ್ಲ. ಬೀಪಿ, ಶುಗರ್ ಗೊಡವೆಯಿರಲಿಲ್ಲ. ಟೀವಿ ಶೋ ಒಂದರಲ್ಲಿ ಪ್ರತಿಬಿಂಬಿಸಿದಂತೆ ಇಡೀ ಊರಿನ ಮಹಿಳೆಯರೆಲ್ಲ ಗರ್ಭ ಕೋಶ ತೆಗೆಸಿಕೊಂಡು ಬರಡಾದ ಪ್ರಮೇಯ ಸಹ ಇರಲಿಲ್ಲ. ನೂರ್ಕಾಲ ಬದುಕಿ ಬಾಳಿ, ಮರಿ ಮೊಮ್ಮಕ್ಕಳ ಆಟ, ಪಾಠ ಕಂಡ ತಲೆಮಾರುಗಳು ನಮ್ಮ ದೇಶದ ಹೆಮ್ಮೆ. ಮನೆ ಮದ್ದಿನ ಉಪಕಾರದ ಪುರಾವೆ. ಬಾಣಂತನದ ಗಟ್ಟಿಗತನದ, ಬೊಜ್ಜು ಬರಿಸಿಕೊಳ್ಳದೆ, ಶಿಶುವಿಗೆ ಕನಿಷ್ಠ ಅವಧಿ ಹಾಲುಣಿಸಿದ ತಾಯಂದಿರ ನೆಮ್ಮದಿ ದಿನಗಳವು. ಅಂತಹ ಆರೋಗ್ಯಯುತ ಮಹಿಳಾ ಆರೋಗ್ಯಕ್ಕೆ ಹೊಸಿಲ ಪೂಜೆಯ ಮೂಲಿಕೆಗಳ ಬಳಕೆ ನಾಂದಿ.

ಮನೆಯಂಗಳದ ನಿತ್ಯ ಸಂಜೀವಿನಿ ತುಳಸಿ ನಿಜ. ಆದರೆ ಮಳೆಗಾಲದ ಕಾಯಿಲೆಗೆ ದವನ (ಆರ್ಟಮಿಸಿಯ), ಕಚೋರ (ಕುರ್ಕುಮಾ ಝಿಯೊಡರಿ) ನೀರುಕಡ್ಡಿ (ಬಾಲ್ಸಂ), ನೆಲಸಂಪಿಗೆ, ರಥಹೂ (ಕ್ಲಿರೊಡೆಂಡ್ರಮ)ಗಳ ಸಮರ್ಥ ಬಳಕೆ ತಾಯಂದಿರ ಮೌಖಿಕ ಪರಂಪರೆಯ ದೆಹಲಿಯ ಪೂಜೆಯಲ್ಲಿದೆ. ಆದರೆ ಇಂದಿನ ನಾಗಾಲೋಟದ ನವ ನಾಗರಿಕತೆ(?)ಯ ದಿನಗಳಲ್ಲಿ ದೆಹಲಿಯಲ್ಲಿ ಆಳುವ ದೊರೆಗಳ ಆಟಾಟೋಪ ದಲ್ಲಿ ಜನಪದ ಸಂಸ್ಕೃತಿ ಮತ್ತು ಮೌಖಿಕ ಪರಂಪರೆಗಳು ಮಾತ್ರ ಅವಸಾನದ ಅಂಚಿನಲ್ಲಿವೆ. ಹಾಗೆಯೇ ಮದ್ದಿನ ಕಂಪೆನಿಗಳ ಅತಿ ಕೊಯಿಲಿನ ದೆಸೆಯಿಂದ ಸಹ ಪರಿಸರದ ಸಸ್ಯ ಜಾತಿಗಳೂ ವಿನಾಶದಂಚಿನಲ್ಲಿವೆ. ಇಂತಹ ಪರಂಪರೆಯ ಉಳಿವು ಮತ್ತು ಮುಂದುವರಿಸುವಿಕೆ ಇಂದು ನಮ್ಮ ಕೈಯಲ್ಲಿದೆ.

– ಡಾ. ಸತ್ಯನಾರಾಯಣ ಭಟ್ ಪಿ.

SBI Life
INSURANCE
With Us, You're Sure

**Balakrishna Rao**
*Insurance Advisor (Code :16281955)*

A Certified Insurance Advisor of
SBI Life Insurance Company Limited

Member - CH CLUB (FY 2018-19)
SBI Life Insurance Co. Ltd.

#353, "Sri Krishna", 17th Main Road
Nandini Layout, Bengaluru - 560 096
Mob : 93412 42431
E-mail : bkrao353@gmail.com



# ಬೃಂದಾವನ ಗೆಸ್ಟ್ ಹೌಸ್

# BRINDAVANA GUEST HOUSE

*Posh, Homely Veg, P.G. for Ladies & Gents, with all Amenities.*

At No 9, 2nd Cross, 3rd Phase, 5th Block,
Bhuvaneshwari Nagar
BSK 3rd Stage, Bangalore - 560 085
E-mail : rajapanambur@yahoo.co.in

Prop.: **Ashokraj P** - **Mob : 99860 40802**

ವಿ.ಸೂ: ಎಲ್ಲಾ ಕಡೆಗಳಿಗೆ ಉತ್ತಮ ಸಾರಿಗೆ ಸಂಪರ್ಕ ಹೊಂದಿರುವ ಬನಶಂಕರಿ ಕೇಂದ್ರ ಭಾಗದಲ್ಲಿ ಇರುವ ಎಲ್ಲಾ ಅನುಕೂಲಗಳನ್ನು ಹೊಂದಿರುವ ಸುಸಜ್ಜಿತ ಪೇಯಿಂಗ್ ಗೆಸ್ಟ್ ಸವಲತ್ತನ್ನು ಆನಂದ ಬಳಗದ ಸದಸ್ಯರು ಪರಿಚಯಿಸುವ ಅತಿಥಿಗಳಿಗೆ ಸೂಕ್ತ ರಿಯಾಯಿತಿ ದರದಲ್ಲಿ ನೀಡಲಾಗುವುದು.

ಶುಭಾಶಯಗಳನ್ನು ಕೋರುವವರು :



# ಉಡುಪಿ ಸ್ಟೋರ್ಸ್

ಗುಂಡೋಪಂತ ಬೀದಿ, ಮಾರ್ಕೆಟ್ ರಸ್ತೆ,
ಬೆಂಗಳೂರು - 560002

**ಮನೆಗಳಿಗೆ, ದೇವಸ್ಥಾನಗಳಿಗೆ, ಹಾಗೂ ಮಠಗಳಿಗೆ ಉಪಯುಕ್ತವಾದ ಪೂಜಾ ಸಾಮಗ್ರಿಗಳು, ಉತ್ತಮ ದಾವಣಿ, ಮಗುಟ, ಮಡಿಪಂಚೆ, ಗೋಪೀಚಂದನ, ಧಾರ್ಮಿಕ ಅಧ್ಯಾತ್ಮಿಕ ಪುಸ್ತಕಗಳು, ಇಲ್ಲಿ ಸುಲಭ ದರದಲ್ಲಿ ದೊರೆಯುತ್ತದೆ.**

ಸ್ಥಾಪಕರು : ದಿವಂಗತ ಟಿ. ಆರ್. ಕೇಕುಡ

*With Best Compliments from :*

# MOOLA TOOLS LLP
# MOOLA TECHNOLOGIES (P) LIMITED
# ERKADI SYSTEMS

***Manufacturers of Ventilators, Monitors, Operation room equipments, Anaesthesia Machines and other equipments.***

# 109, Electronic City, 1st Phase, Hosur Road,
Bangalore - 560 100
Tel : 080 - 2852 2442, 2852 2443,
Fax : 080 - 2852 2441
***Email : sales@erkadi.com***

**K.Y. Ashok Murthy**
Managing Director

*With Best Compliments From :*

# M. BHASKAR RAO



## ಶ್ರೀ ಗಣೇಶ ಸ್ಟೀಲ್ ಸೆಂಟರ್

# 12, S.L.N. Charties Building, Vanivilasa Institute Road
Kalasipalyam Post, Bangalore - 560 002
Phone : Shop : 2670 9752 / Residence : 2669 5751

ಶುಭಾಶಯಗಳೊಡನೆ,

## ಬಿ.ಗಣಪತಿ ಹೆಬ್ಬಾರ್



## ಶ್ರೀ ಅಕ್ಷಯ ಉಪಾಹಾರ್

ವಿ.ವಿ.ಐ. ರಸ್ತೆ, ಫೋರ್ಟ್,
ಬೆಂಗಳೂರು 560 002
ಮೊಬೈಲ್ : 99724 29854

ಶುಭಾಶಯಗಳೊಡನೆ,

**ಕೋಟೇಶ್ವರ ಸೂರ್ಯನಾರಾಯಣ ರಾವ್**
ಸಾಹಿತ್ಯ ಸಮಾಜ ಸೇವೆ

ಪ್ರಶಸ್ತಿ ಪುರಸ್ಕೃತ
ಡಿವಿಜಿ ಪ್ರಶಸ್ತಿ, ಧರ್ಮಭೂಷಣ, ಆರ್ಯಭಟ
ಕರ್ನಾಟಕ ಭೂಷಣ, ಪ್ರಜ್ಞಾಪೀಠ ಪ್ರಶಸ್ತಿ,
ಶ್ರೀ ಕೃಷ್ಣಕೃಪಾ ಪ್ರಶಸ್ತಿ, ಆದರ್ಶ ಸಮಾಜ ರತ್ನ

**ಕೋಟೇಶ್ವರ ಸೂರ್ಯನಾರಾಯಣ ರತ್ನ ಟ್ರಸ್ಟ್ ರಿ.**
ಅಧ್ಯಕ್ಷರು

ಉದ್ಯಮ :

**ಮಹಾಲಕ್ಷ್ಮೀ ಫ್ಯಾನ್ಸಿ ಸ್ಟೋರ್ಸ್**
21/2, ಕೋಟೇಶ್ವರ ರಸ್ತೆ, ಡಿವಿಜಿ ಅಡ್ಡರಸ್ತೆ, ಬಸವನಗುಡಿ
ಬೆಂಗಳೂರು - 04
ದೂರವಾಣಿ :
ಉದ್ಯಮ : 26675378, ಮನೆ : 26624163
ಸಹಯೋಗ : ಕೆ.ಎಸ್. ರಮೇಶ್



# ಸುದ್ದಿ ಸಂಗ್ರಹ

☞ ಬಳಗದ ಕಾರ್ಯಕಾರಿ ಸಮಿತಿಯ ಸಕ್ರಿಯ ಸದಸ್ಯರಾದ ಶ್ರೀ ಪಿ.ಎನ್. ವಿಷ್ಣುಮೂರ್ತಿ ಕುದ್ದಣ್ಣಾಯ ಮತ್ತು ಶ್ರೀಮತಿ ವಂದನಾ ದಂಪತಿಗಳ ಸುಪುತ್ರಿ ಸೌ॥ ವರ್ಷಾ ಇವರ ವಿವಾಹ ಮಹೋತ್ಸವ ಶ್ರೀ ಕುಂಡಲ ಪುಂಡರೀಕಾಕ್ಷ ಆಚಾರ್ಯ ಮತ್ತು ಶ್ರೀಮತಿ ಶೋಭಾರಾಣಿಯವರ ಸುಪುತ್ರ ಚಿ॥ ಅಜಿತ್ ಜೊತೆ ದಿನಾಂಕ 12.12.2018 ರಂದು ಪೆರಾಜೆ, ಮಾಣಿಯಲ್ಲಿರುವ ಶ್ರೀ ರಾಮಚಂದ್ರಾಪುರ ಮಠದ 'ಜನ ಭವನ' ಸಭಾಗೃಹದಲ್ಲಿ ಸಂಭ್ರಮದಿಂದ ನೆರವೇರಿದೆ. ಈ ಮದುವೆಯ ನಿಶ್ಚಿತಾರ್ಥ ಸಮಾರಂಭವು ದಿನಾಂಕ 6.7.2018 ರಂದು ಬೆಂಗಳೂರಿನ ಶರಣ ಸೇವಾ ಸಮಾಜದ ಸಮುದಾಯ ಭವನದಲ್ಲಿ ಅದ್ದೂರಿಯಾಗಿ ನಡೆದಿತ್ತು.

☞ ಹೊರನಾಡಿನಲ್ಲಿ ಕನ್ನಡದ ಕಂಪನ್ನು ಪಸರಿಸುತ್ತಿರುವ ದೆಹಲಿ ಕನ್ನಡಿಗೆ ಪತ್ರಿಕೆಯ ಸಂಪಾದಕರಾದ ಶ್ರೀ ಬಾ. ಸಾಮಗ ರವರಿಗೆ ಕೊಡವೂರಿನ ಯುವಕ ಸಂಘವು ಕರ್ನಾಟಕ ರಾಜ್ಯೋತ್ಸವ ದಿನದಂದು ಪ್ರಶಸ್ತಿ ನೀಡಿ ಸನ್ಮಾನಿಸಿದೆ.

☞ ಅಹೋರಾತ್ರಿ ಭಜನೆ : ಬಳಗದ ಆಜೀವ ಸದಸ್ಯರಾದ ಶ್ರೀ ಕೆ. ಕೃಷ್ಣರಾವ್ ಮತ್ತು ಅವರ ಕುಟುಂಬದವರ ಪ್ರಾಯೋಜಕತ್ವದಲ್ಲಿ ಕಳುವಾರು ಶ್ರೀ ಬೆಂಕಿನಾಥೇಶ್ವರ ದೇವರ ಸನ್ನಿಧಿಯಲ್ಲಿ ಅಹೋರಾತ್ರಿ ಭಜನಾ ಮಂಗಲೋತ್ಸವವು ದಿ.17.11.2018 ರಂದು ವಿದ್ಯುಕ್ತವಾಗಿ ನಡೆದಿರುತ್ತದೆ. ಶ್ರೀ ಮದ್ದರಿನಾಮ ಸಂಕೀರ್ತ ನೋಪಾಸನಾ ಸಂಘದ 104ನೇ ವರ್ಷದ ಕಾರ್ಯಕ್ರಮದ ಅಂಗವಾಗಿ ಸಂಘದ 80ನೇ ವರ್ಷದ ಈ ಅಹೋರಾತ್ರಿ ಭಜನೆಯು ದಿ.17.11.2018ನೇ ಶನಿವಾರ ಸೂರ್ಯೋದಯ ದಿಂದ ಮರುದಿನ ಸೂರ್ಯೋದಯದವರೆಗೆ ವಿವಿಧ ಭಜನಾ ಮಂಡಳಿಗಳ ಸಹಯೋಗದಲ್ಲಿ ಅಖಂಡವಾಗಿ ನೆರವೇರಿತು.

☞ **ಮಯೂರ ಸಮೂಹದಿಂದ ಶ್ರೀ ಜಿ. ಶ್ರೀನಿವಾಸರಾವ್ ರವರಿಗೆ ಪ್ರೀತಿಯ ಪ್ರಣಾಮ.**



ಬೆಂಗಳೂರಿನ ಮಯೂರ ಸಮೂಹದ ಸ್ಥಾಪಕರಾಗಿ ಮತ್ತು ರೂವಾರಿಯಾಗಿರುವ ಶ್ರೀ ಗೋಪಾಡಿ ಶ್ರೀನಿವಾಸರಾವ್ ರವರಿಗೆ ಪ್ರೀತಿಯ ಪ್ರಣಾಮವನ್ನು ಸಲ್ಲಿಸುವ ವಿಶೇಷವಾದ ಸಮಾರಂಭವನ್ನು ಅವರ ಅಭಿಮಾನಿ ಬಳಗ ದಿ.15.12.2018 ರಂದು ವಿಜಯನಗರ ಬಂಟ್ಸ್ ಸಂಘದ ಸಭಾಂಗಣದಲ್ಲಿ ಅದ್ದೂರಿಯಿಂದ ಸಂಯೋಜಿ ಸಿತ್ತು. ಸಂಜೆಯ ಕಾರ್ಯಕ್ರಮದಲ್ಲಿ ಮೈಯ್ಯಾ ಬೆವರೇಜಸ್ ಮತ್ತು ಫುಡ್ಸ್ ಪ್ರೈ ಲಿಮಿಟೆಡ್‌ನ ನಿರ್ದೇಶಕರಾದ ಡಾ.ಪಿ. ಸದನಾಂದ ಮೈಯ್ಯ, 'ವಿಶ್ವವಾಣಿ' ದಿನಪತ್ರಿಕೆಯ ವ್ಯವಸ್ಥಾಪಕ ನಿರ್ದೇಶಕರು ಮತ್ತು ಪ್ರಧಾನ ಸಂಪಾದಕರಾದ ಶ್ರೀ ವಿಶ್ವೇಶ್ವರ ಭಟ್, ಕನ್ನಡ ಪ್ರಭ ದೈನಿಕದ ಮುಖ್ಯ ಸಂಪಾದಕರಾದ ಶ್ರೀ ರವಿ ಹೆಗ್ಡೆ, ಸಾಹಿತಿ ಡಾ.ನಾ. ಸೋಮೇಶ್ವರ ರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಈ ಸಂದರ್ಭದಲ್ಲಿ ಜಿ. ಶ್ರೀನಿವಾಸರಾಮರ ಯಶೋಗಾಥೆಯನ್ನು ಬಿಂಬಿಸುವ 'ಕಾಯಕಯೋಗಿ' ಹಾಗೂ ಜನಪ್ರಿಯ ಸಾಹಿತಿ ಶ್ರೀ ಜೋಗಿಯವರು ಬರೆದಿರುವ ಆಹಾರ ಉದ್ಯಮದಲ್ಲಿ ಗೆಲ್ಲುವುದು ಹೇಗೆ? ಎಂಬ ಎರಡು ಪುಸ್ತಕಗಳನ್ನು ಲೋಕಾರ್ಪಣೆ ಮಾಡಲಾಗಿದೆ. ಸಮಾರಂಭದಲ್ಲಿ ಮಾತನಾಡಿದ ಜಿ. ಶ್ರೀನಿವಾಸರಾವ್‌ರವರು ವ್ಯವಹಾರ ದಲ್ಲಿ ಸೇವಾಮನೋಭಾವ ಅತಿ ಮುಖ್ಯ. ಅದೇ ತಮ್ಮ ಯಶೋಗಾಥೆಯ ಮೂಲ ಕಾರಣ ಎಂದು ತಿಳಿಸಿ, ತಮ್ಮ ಜೀವನ ಪಯಣದಲ್ಲಿ ಸಹಕರಿಸಿದ, ಯಶಸ್ಸಿನಲ್ಲಿ ಭಾಗಿಯಾಗಿರುವ ಸರ್ವರಿಗೂ ವಂದನೆ ಸಲ್ಲಿಸಿದರು.

***

☞ ಬೆಂಗಳೂರಿನ ಆರ್.ಟಿ. ನಗರದ ಶ್ರೀ ವಿನಾಯಕ ದೇವಸ್ಥಾನದ 9 ಸದಸ್ಯರ ಆಡಳಿತ ಮಂಡಳಿ ಮುಂದಿನ ಮೂರು ವರ್ಷಗಳ ಅವಧಿಗೆ ರಚನೆಯಾಗಿದ್ದು, ಬಳಗದ ಸಕ್ರಿಯ ಸದಸ್ಯರಾದ ಶ್ರೀ ಪಿ. ಅನಂತರಾಜ್‌ರವರ ನೇತೃತ್ವದ ತಂಡ ದಿ. 18.11.2018 ರಂದು ನಡೆದ ಚುನಾವಣೆ ಪ್ರಕ್ರಿಯೆಯಲ್ಲಿ ಆಡಳಿತ ಮಂಡಳಿಗಾಗಿ ಆಯ್ಕೆಯಾಗಿರುತ್ತದೆ. ಶ್ರೀ ಅನಂತರಾಜ್‌ರವರು ಕಳೆದ ಮೂರು ವರ್ಷಗಳ ಅವಧಿಯಲ್ಲಿ ಮಂಡಳಿಯ ಅಧ್ಯಕ್ಷರಾಗಿ ದೇವಸ್ಥಾನದ ಅಭಿವೃದ್ಧಿಗಾಗಿ ಸಲ್ಲಿಸಿದ ವಿಶೇಷ ರೀತಿಯ ಕೊಡುಗೆಯನ್ನು ಹಾಗೂ ಅವರ ತಂಡದ ದಕ್ಷ ವ್ಯವಸ್ಥಾಪನಾ ವೈಖರಿಯನ್ನು ಗುರುತಿಸಿ, ಸದಸ್ಯರು ಶ್ರೀ ರಾಜ್‌ರವರ ನೇತೃತ್ವದ ತಂಡವನ್ನು ಮರು ಆಯ್ಕೆ ಮಾಡಿರುತ್ತಾರೆ. ಶ್ರೀ ಅನಂತರಾಜ್‌ರವರಿಗೆ ಹಾರ್ದಿಕ ಅಭಿನಂದನೆಗಳು.

☞ ಖ್ಯಾತ ಸಂಗೀತ ಕಲಾವಿದರಾದ ಶ್ರೀ ವಿದ್ಯಾಭೂಷಣರವರು ಬೆಂಗಳೂರಿನಲ್ಲಿ ನೂತನವಾಗಿ ನಿರ್ಮಿಸಿದ ನರಸಿಂಹ ಹಾಗೂ ಪುರಂದರದಾಸ ದೇವಸ್ಥಾನದಲ್ಲಿ ದೀಪಾವಳಿಯ ಅಂಗವಾಗಿ ದಿ.12.11.2018ರ ಶನಿವಾರ ಆನಂದ ಬಳಗದ



ಸದಸ್ಯರು ಹಾಗೂ ತೌಳವ ಮಧ್ವ ಒಕ್ಕೂಟದ ಸದಸ್ಯರು ತುಳಸೀ ಸಂಕೀರ್ತನೆ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು. ಧಾರ್ಮಿಕ ವಿಭಾಗದ ಸಂಚಾಲಕರಾದ ಶ್ರೀ ವೈ. ಜಯಂತರಾವ್‌ರವರ ನೇತೃತ್ವದಲ್ಲಿ ಶ್ರೀ ವಿದ್ಯಾಭೂಷಣರವರ ಅಪೇಕ್ಷೆ ಮೇರೆಗೆ ನಡೆದ ಈ ಸೇವಾ ಕಾರ್ಯಕ್ರಮದ ನಂತರ ಶ್ರೀ ವಿದ್ಯಾಭೂಷಣರವರು ಸಂಕೀರ್ತನೆಯಲ್ಲಿ ಪಾಲ್ಗೊಂಡ ಎಲ್ಲಾ ಸದಸ್ಯರಿಗೆ ಶಾಲು ಹೊದಿಸಿ ಹರಸಿದರು.

☞ ಬಳಗದ ಸದಸ್ಯರಾದ ಶ್ರೀ ಕೆ.ಆರ್. ಹರಿಪ್ರಸಾದ್ ರಾವ್ ಮತ್ತು ಶ್ರೀಮತಿ ಪುಷ್ಪಾವತಿ ದಂಪತಿಗಳ ಪುತ್ರ ಚಿ॥ ಆಶಿಕ್ ಇವರ ವಿವಾಹ ದಿನಾಂಕ 30.12.2018 ರಂದು ಶ್ರೀ ಗುರುರಾಜ ಮನಗುಳಿ ದಂಪತಿಗಳ ಸುಪುತ್ರಿ ಸೌ॥ ಅಭಾ ಎಂಬ ವಧುವಿನ ಜೊತೆ ಬೆಂಗಳೂರಿನ ಪೂರ್ಣಿಮಾ ಕನ್ವೆಷನ್ ಹಾಲ್‌ನಲ್ಲಿ ಅದ್ದೂರಿಯಿಂದ ಜರಗಿತು.

***

## ಭಾವಪೂರ್ಣ ಶ್ರದ್ಧಾಂಜಲಿ



### ರಾಜಕೀಯ ದಿಗಂತದಿಂದ ಮರೆಯಾದ ಅನಂತಕುಮಾರ್

ಆನಂದ ಬಳಗದ ಪರಮ ಹಿತೈಷಿಗಳಾಗಿದ್ದ, ಭಾರತ ಸರ್ಕಾರದಲ್ಲಿ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವರಾಗಿದ್ದ ಶ್ರೀ ಹೆಚ್.ಎನ್. ಅನಂತ ಕುಮಾರ್‌ರವರು ದಿ. 12.11.2018 ರಂದು ದಿವಂಗತರಾಗಿದ್ದಾರೆ. ಬೆಂಗಳೂರು ದಕ್ಷಿಣ ಕ್ಷೇತ್ರದಿಂದ ಅನೇಕ ಬಾರಿ ಲೋಕಸಭೆಗೆ ಆಯ್ಕೆಯಾಗಿ ವಾಜಪೇಯಿ ಮತ್ತು ಪ್ರಸಕ್ತ ಮೋದಿ ಸರ್ಕಾರದ ಮಂತ್ರಿ ಮಂಡಲದಲ್ಲಿ ದಕ್ಷ ಸಚಿವರೆಂದು ಜನಪ್ರಿಯರಾಗಿದ್ದ ಶ್ರೀ ಅನಂತ ಕುಮಾರ್‌ರವರು ಯಾವುದೇ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕಾರ್ಯಗಳಿಗೆ ಅಪಾರವಾದ ಸಹಕಾರ ಮತ್ತು ಬೆಂಬಲ ನೀಡುತ್ತಿದ್ದ ಅಪರೂಪದ ಅಜಾತಶತ್ರು ರಾಜಕಾರಣಿಯಾಗಿದ್ದರು. ಕರ್ನಾಟಕದ ಹಿತಕ್ಕೆ ಪೂರಕವಾದ ಕರ್ನಾಟಕದ ಯಾವುದೇ ವಿಚಾರಗಳಿಗೆ ಕೇಂದ್ರ ಸರ್ಕಾರದಲ್ಲಿ ಸಂಪರ್ಕ ಕೊಂಡಿಯಾಗಿದ್ದು, ರಾಜ್ಯಕ್ಕೆ ನೆರವಾಗುತ್ತಿದ್ದ ಶ್ರೀ ಅನಂತ ಕುಮಾರ್‌ರವರ ಅಕಾಲಿಕ ಅಗಲಿಕೆ ದೇಶಕ್ಕೆ, ರಾಜ್ಯಕ್ಕೆ ಮತ್ತು ನಮಗೆಲ್ಲರಿಗೂ ತುಂಬಲಾರದ ನಷ್ಟ. ಆನಂದ ಬಳಗದ ಕೆಲವು ಕಾರ್ಯಕ್ರಮಗಳಲ್ಲೂ ಭಾಗವಹಿಸಿದ್ದ, ಬಳಗದ ಹಿತೈಷಿ ಶ್ರೀ ಅನಂತ ಕುಮಾರ್‌ರವರ ಆತ್ಮಕ್ಕೆ ಭಗವಂತ ಚಿರಶಾಂತಿ ನೀಡಲಿ ಎಂದು ಆನಂದಬಳಗದ ಪ್ರಾರ್ಥನೆ.

## ನಿಧನ

ಬಳಗದ ಹಿರಿಯ ಸದಸ್ಯರಾದ ಶ್ರೀ ಯು.ಬಿ. ರಾಜಗೋಪಾಲ ರಾವ್‌ರವರು ದಿ.19.12.2018 ರಂದು ದೇವಾಧೀನರಾಗಿದ್ದು, ಈ ಸಂಬಂಧ ವೈಕುಂಠ ಸಮಾರಾಧನೆಯು ದಿ.31.12.2018 ರಂದು ಶ್ರೀ ಪೂರ್ಣ ಪ್ರಜ್ಞ ವಿದ್ಯಾಪೀಠದಲ್ಲಿ ವಿಧ್ಯುಕ್ತವಾಗಿ ನೆರವೇರಿದೆ. ಮೃತರ ಆತ್ಮಕ್ಕೆ ಶ್ರದ್ಧಾಂಜಲಿ.



Start the day feeling .....



.......Light & comfortable

**For sure relief from CONSTIPATION use...**




**Dosage:**
Anuloma DS Tablets - 1 to 2 tablets at bedtime with warm water

**Dosage:**
Anuloma Churna - ½ to 1 teaspoonful at bedtime with warm water.

With best compliments from the manufacturers of:

**Anuloma**®
DS Tab and Churna

For Safe and Sure relief from Constipation




BPRL Since 1950

**SAGAR PHARMACEUTICALS**
Herbal Healthcare Division of BPRL PVT. LTD.

Sagar Since 1975

No.163, Reservoir Street, Basavanagudi, Bangalore - 560 004. INDIA. Consumer Care No.: 080-41208661 Website: www.sagarpharma.in

Bhruguvani (Oct - December 2018) Regd. with RNI under No.KARKAN/2012/45587 No. of Pages : 36 (32+4)




If undelivered please return to:
**Ananda Balaga**
Hotel Ajantha Complex, 22A, M.G. Road
Bengaluru - 560 001
Phone : 2559 4457

Published by Smt. Geetha.V.Rao, President, Ananda Balaga, Bengaluru - 560 001 Printed by Omkar Offset Printers, Bengaluru - 02